# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಡಿಸೆಂಬರ್ 24, 2020

ಸಂಪುಟ : 47 ಸಂಚಿಕೆ : 234 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 3.00 www.janathavani.com janathavani@mac.com


## ಜಿ.ಪಂ. ನೂತನ ಅಧ್ಯಕ್ಷರಾಗಿ ಕೆ.ವಿ. ಶಾಂತಕುಮಾರಿ ಆಯ್ಕೆ



ದಾವಣಗೆರೆ, ಡಿ. 23- ಜಿಲ್ಲಾ ಪಂಚಾಯತಿ ನೂತನ ಅಧ್ಯಕ್ಷರಾಗಿ ಜಗಳೂರು ತಾಲ್ಲೂಕು ದೊಣ್ಣೆಹಳ್ಳಿ ಕ್ಷೇತ್ರದ ಜಿ.ಪಂ. ಸದಸ್ಯೆ ಕೆ.ವಿ. ಶಾಂತ ಕುಮಾರಿ ಆಯ್ಕೆಯಾದರು.

ದೀಪಾ ಜಗದೀಶ್ ಅವರ ರಾಜೀನಾಮೆಯಿಂದ ಕಳೆದ ಡಿ. 8 ರಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಿತು.

ಮಧ್ಯಾಹ್ನ 12 ಗಂಟೆಯಿಂದ 1 ಗಂಟೆಯವರೆಗೆ ನಾಮಪತ್ರ ಸಲ್ಲಿಕೆಗೆ ಅವಧಿ ನಿಗದಿಪಡಿಸಲಾಗಿತ್ತು. ಕೆ.ವಿ. ಶಾಂತಕುಮಾರಿ ಅವರು ಮಾತ್ರ ಎರಡು ನಾಮಪತ್ರ ಸಲ್ಲಿಸಿದರು.

ಮಧ್ಯಾಹ್ನ 3 ಗಂಟೆಗೆ ಚುನಾವಣಾಧಿಕಾರಿ ಹಾಗೂ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ನವೀನ್‌ರಾಜ್ ಸಿಂಗ್ ಅವರು ನಾಮಪತ್ರ ಪರಿಶೀಲಿಸಿ, ನಾಮಪತ್ರಗಳು ಕ್ರಮಬದ್ಧ ವಾಗಿವೆ ಎಂದು ಪ್ರಕಟಿಸಿದರು. ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಶಾಂತ ಕುಮಾರಿ ಅವರು ಜಿಲ್ಲಾ ಪಂಚಾಯತಿ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು. (5ನೇ ಪುಟಕ್ಕೆ)

## ಶಾಲೆ ಆರಂಭದ ನಿರ್ಧಾರದಲ್ಲಿ ಬದಲಾವಣೆ ಇಲ್ಲ: ಸಚಿವರ ಸ್ಪಷ್ಟನೆ

ಬೆಂಗಳೂರು, ಡಿ. 23 - ಜನವರಿ 1 ರಿಂದ ಶಾಲಾ-ಕಾಲೇಜುಗಳನ್ನು ಆರಂಭಿಸುವ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ತಿಳಿಸಿದ್ದಾರೆ.

ಬ್ರಿಟನ್‌ನ ಹೊಸ ಕೊರೊನಾ ತಳಿಗೆ ಸಂಬಂಧಿಸಿದಂತೆ ತಜ್ಞರು ನೀಡಿರುವ ವರದಿ ಅಧ್ಯಯನ ಮಾಡಿದ ನಂತರ ಸುರೇಶ್‌ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತರಗತಿಗಳು ನಿಗದಿತ ಸಮಯದಲ್ಲೇ ಆರಂಭವಾಗಲಿವೆ ಎಂದರು.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಈ ಹಿಂದೆ ಹೊರಡಿಸಿರುವ ಆದೇಶದಂತೆ ಆರಂಭವಾಗಲಿವೆ. ಆದರೂ ನಾವು ಕಾಲಾನುಕಾಲಕ್ಕೆ ತಜ್ಞರು ನೀಡುವ ಸಲಹೆ, ಸೂಚನೆಗಳನ್ನು ಪಾಲನೆ ಮಾಡುತ್ತೇವೆ ಎಂದರು. ಇಂದು ಎಲ್ಲಾ ಸಿಇಓ, ಡಿಡಿಪಿಐಗಳ ಜೊತೆ (5ನೇ ಪುಟಕ್ಕೆ)

# ಇಂದು ರಾತ್ರಿಯಿಂದಲೇ ಕರ್ಫ್ಯೂ

## ಆದರೂ, ಕ್ರಿಸ್‌ಮಸ್ ಸಮಾರಂಭಕ್ಕೆ ಕರ್ಫ್ಯೂ ಅನ್ವಯವಾಗದು !

## ರಾತ್ರಿ ಕರ್ಫ್ಯೂ ಬಗ್ಗೆ ಸರ್ಕಾರದ ದಿನಕ್ಕೊಂದು, ಗಂಟೆಗೊಂದು ನಿರ್ಧಾರ

ಬೆಂಗಳೂರು, ಡಿ. 23 - ರಾತ್ರಿ ಕರ್ಫ್ಯೂ ಹೇರುವುದಿಲ್ಲ ಎಂದು ಮಂಗಳವಾರವಷ್ಟೇ ಹೇಳಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬುಧವಾರದಂದು ನಿಲುವು ಬದಲಿಸಿ ಇದೇ ದಿನದಿಂದ ಜಾರಿಗೆ ಬರುವಂತೆ ರಾತ್ರಿ 10ರಿಂದ ಬೆಳಿಗ್ಗೆ 6ರವರೆಗೆ ಕರ್ಫ್ಯೂ ವಿಧಿಸುವುದಾಗಿ ತಿಳಿಸಿದ್ದರು.

ನಂತರ ಇನ್ನೊಮ್ಮೆ ನಿಲುವು ಬದಲಿಸಿ, ಗುರುವಾರ ರಾತ್ರಿ 11ರಿಂದ ಬೆಳಿಗ್ಗೆ 5ರವರೆಗೆ ಮಾತ್ರ ಕರ್ಫ್ಯೂ ಜಾರಿಯಲ್ಲಿರಲಿದೆ ಎಂದು ತಿಳಿಸಿದ್ದಾರೆ. ಅಷ್ಟೇ ಅಲ್ಲದೇ, ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಗುರುವಾರ ಮಧ್ಯರಾತ್ರಿಯ ವಿಶೇಷ ಧಾರ್ಮಿಕ ಕಾರ್ಯಕ್ರಮಗಳನ್ನು (ಮಿಡ್ ನೈಟ್ ಮಾಸ್) ಯಾವುದೇ ಅಡಚಣೆಯಿಲ್ಲದೇ ಮಾಡಬಹುದು ಎಂದೂ ಹೇಳಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಉಪ ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವ ಲಕ್ಷ್ಮಣ ಸವದಿ, ರಾತ್ರಿ ಕರ್ಫ್ಯೂ ಇದ್ದರೂ ಸಾರಿಗೆ ಬಸ್‌ಗಳು ಎಂದಿನಂತೆ ಸಂಚರಿಸಲಿವೆ ಎಂದು ಹೇಳಿದ್ದಾರೆ.

ಈ ಮಧ್ಯೆ, ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ ಭಾಸ್ಕರ್ ಅವರು ರಾತ್ರಿ ಕರ್ಫ್ಯೂ ಕುರಿತು ಆದೇಶ ಹೊರಡಿಸಿದ್ದು, ಡಿ.24ರಿಂದ ಜನವರಿ 2ರ ವರೆಗೆ ರಾತ್ರಿ 11ರಿಂದ ಬೆಳಿಗ್ಗೆ 6 ಗಂಟೆಯವರೆಗೆ ಕಠಿಣ ಕರ್ಫ್ಯೂ ಜಾರಿಯಲ್ಲಿರಲಿದೆ ಎಂದು ತಿಳಿಸಿದ್ದಾರೆ.

ಯುರೋಪ್ ರಾಷ್ಟ್ರಗಳಲ್ಲಿ ಹೊಸ ಬಗೆಯ ಕೊರೊನಾ ವೈರಸ್ ಹರಡುತ್ತಿರುವ ಕಾರಣ ನೀಡಿರುವ ರಾಜ್ಯ ಸರ್ಕಾರ ರಾತ್ರಿ ಕರ್ಫ್ಯೂ ಹೇರುವುದಾಗಿ ತಿಳಿಸಿದೆ.

ಬ್ರಿಟನ್‌ನಲ್ಲಿ ಕೊರೊನಾದ ಹೊಸ ರೀತಿಯ ವೈರಸ್ ಹರಡಿದೆ. ಆದರೆ, ದೇಶದಲ್ಲಿ ಇದು ಇನ್ನೂವರೆಗೂ ಕಂಡು ಬಂದಿಲ್ಲ. ರಾಜ್ಯದಲ್ಲಿ ರಾತ್ರಿ ಕರ್ಫ್ಯೂ ಹೇರುವುದಿಲ್ಲ ಎಂದು ರಾಜ್ಯ ಸರ್ಕಾರ ಮಂಗಳವಾರದ ವರೆಗೂ ಹೇಳುತ್ತಾ ಬಂದಿತ್ತು. ಆದರೆ, ದಿಢೀರನೆ ಗುರುವಾರದಿಂದ ಜಾರಿಗೆ ಬರುವಂತೆ ಕರ್ಫ್ಯೂ ಜಾರಿಗೆ ತರಲಾಗಿದೆ.

ರಾತ್ರಿ 10ರಿಂದ ಬೆಳಿಗ್ಗೆ 6ರವರೆಗೆ ಕರ್ಫ್ಯೂ ಜಾರಿಯಲ್ಲಿರಲಿದೆ. ಆದರೆ, ಉಳಿದ ಸಮಯದಲ್ಲಿ ಯಾವುದೇ ನಿರ್ಬಂಧ (5ನೇ ಪುಟಕ್ಕೆ)

### ಇವಕ್ಕಿದೆ ಕರ್ಫ್ಯೂದಿಂದ ವಿನಾಯಿತಿ

ರಾತ್ರಿ ಕರ್ಫ್ಯೂ ಇದ್ದರೂ ಸಹ ಅಗತ್ಯ ಸೇವೆಗಳು ಹಾಗೂ ಖಾಲಿ ವಾಹನಗಳೂ ಸೇರಿದಂತೆ ಸರಕು ಸಂಚಾರಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಿದೆ.

ರಾತ್ರಿ ಕಾರ್ಯಾಚರಣೆಯ ಅಗತ್ಯವಿರುವ ಕೈಗಾರಿಕೆಗಳು ಶೇ.50ರಷ್ಟು ಸಿಬ್ಬಂದಿಯೊಂದಿಗೆ ಕಾರ್ಯ ನಿರ್ವಹಿಸಬಹುದಾಗಿದೆ. ಈ ಸಿಬ್ಬಂದಿ ಸಂಘಟನೆಯ ಸೂಕ್ತ ಗುರುತಿನ ಚೀಟಿಯೊಂದಿಗೆ ಸಂಚರಿಸಬಹುದಾಗಿದೆ.

ನಿರಂತರ ಕಾರ್ಯ ನಿರ್ವಹಿಸುವ ಅಗತ್ಯವಿರುವ ಕೈಗಾರಿಕೆಗಳು, ದೂರ ಸಂಚಾರದ ರೈಲು, ಬಸ್ ಹಾಗೂ ವೈಮಾನಿಕ ಸೇವೆಗಳಿಗೆ ಅನುಮತಿ ಇದೆ.

ವಿಮಾನ, ರೈಲ್ವೆ ಹಾಗೂ ಬಸ್ ನಿಲ್ದಾಣಗಳಿಗೆ ತೆರಳಲು ಟ್ಯಾಕ್ಸಿ ಹಾಗೂ ಆಟೋಗಳಿಗೆ ಅನುಮತಿ ಇದೆ. ಸಂಚಾರದ ವೇಳೆ ಸೂಕ್ತ ಟಿಕೆಟ್ ಹೊಂದಿರಬೇಕು. ಗುರುವಾರ ರಾತ್ರಿಯ ಸಾಮೂಹಿಕ ಕ್ರಿಸ್‌ಮಸ್ ಆಚರಣೆಗೆ ಅನುಮತಿ ನೀಡಲಾಗುವುದು ಎಂದು ಆದೇಶದಲ್ಲಿ ಹೇಳಲಾಗಿದೆ.

### ರಾತ್ರಿ ಕರ್ಫ್ಯೂಗೆ ನೆಟ್ಟಿಗರ ಲೇವಡಿ

ಜನರೇ ತಿರುಗಾಡದ ಸಮಯದಲ್ಲಿ ದೆವ್ವಗಳಿಗೆ ಕರ್ಫ್ಯೂ ಹೇರಲಾಗಿದೆಯೇ ಎಂದು ತರಾಟೆ

ರಾಜ್ಯ ಸರ್ಕಾರ ಜಾರಿಗೆ ತರಲು ಹೊರಟಿರುವ ರಾತ್ರಿ ಕರ್ಫ್ಯೂಗೆ ಅಂತರ್ಜಾಲದಲ್ಲಿ ತೀವ್ರ ಲೇವಡಿ ವ್ಯಕ್ತವಾಗುತ್ತಿದೆ.

ಮೊದಲು ರಾತ್ರಿ 10ರಿಂದ ಬೆಳಿಗ್ಗೆ 6ರವರೆಗೆ ಅಂದ್ರಿ. ಈಗ ರಾತ್ರಿ 11ರಿಂದ ಬೆಳಿಗ್ಗೆ 5 ಗಂಟೆವರೆಗೆ ಅಂತಿದ್ದೀರಿ. ಹೀಗೆ ನಡೆದರೆ 31ನೇ ತಾರೀಕು ರಾತ್ರಿ 1ರಿಂದ 3ರವರೆಗೆ ಕರ್ಫ್ಯೂ ಸಾಕೆಂಬ ಬೇಡಿಕೆ ಬಂದೀತು ಎಂದು ಒಬ್ಬರು ಟ್ವಿಟ್ಟರ್‌ನಲ್ಲಿ ಕಾಲೆಳೆದಿದ್ದಾರೆ.

ರಾತ್ರಿ10 ಗಂಟೆ ಅಲ್ಲಾ 11 ರ ನಂತ್ರ ಬಂದು ಬೆಳಿಗ್ಗೆ ಬೇಗ ಹೋಗತ್ತೇನೆ ಅಂತ ಕೊರೊನಾ ಹೇಳ್ತಾ? ಎಂದು ಇನ್ನೊಬ್ಬರು ಪ್ರಶ್ನಿಸಿದ್ದು, ಜನ ಸಂಖ್ಯೆ ಕಡಿಮೆ ಇರು ಹೊತ್ತಲ್ಲಿ ಕರ್ಫ್ಯೂ ಅಗತ್ಯವಾದರೂ ಏನು ಎಂದು ಕೇಳಿದ್ದಾರೆ.

ಕರ್ಫ್ಯೂ ಇದ್ಮೇಲೆ ಯಾರು ಓಡಾಡೋ ಹಾಗಿಲ್ಲ. ಆದರೆ, ರಾತ್ರಿ ಕ್ರಿಸ್ ಮಸ್ ಆಚರಣೆ ಮಾಡ್ಬೋದಂತೆ ಇದ್ ಯಾವ್ ತರ ಕಾನೂನು...? ನಿಮಗೆ ಹೇಗ್ ಬೇಕೊ ಹಾಗೆ ಮಾಡ್ಬೋದ...? ಎಂಬುದು ಮತ್ತೊಬ್ಬರ ಪ್ರಶ್ನೆ.

ಅಂದ್ರೆ ರಾತ್ರಿ 11 ಗಂಟೆಯಿಂದ 5 ಗಂಟೆವರೆಗೆ ಕೊರೊನಾ ಹರಡುತ್ತೆ - ಉಳಿದ ಸಮಯದಲ್ಲಿ ಕೊರೊನಾ ಮಲಗುತ್ತೆ. ವರ್ಷದ ಕೊನೆಯ ಹಾಸ್ಯ ಎಂದು ಇನ್ನೊಬ್ಬರು ಸರ್ಕಾರದ ಕ್ರಮವನ್ನು ಲೇವಡಿ ಮಾಡಿದ್ದಾರೆ. ಕಡು ಚಳಿಗೆ (5ನೇ ಪುಟಕ್ಕೆ)

## ರೈತರ ದಿನವಾಗಿ ಅಟಲ್‌ಜೀ ಜನ್ಮ ದಿನ



ಬೆಂಗಳೂರು, ಡಿ. 23 - ವಾಜಪೇಯಿ ಅವರ ಹುಟ್ಟುಹಬ್ಬವಾದ ಡಿಸೆಂಬರ್ 25ರಂದು ರೈತರ ದಿನವನ್ನಾಗಿ ಆಚರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಸಹಕಾರಿ ಸಚಿವ ಎಸ್.ಟಿ. ಸೋಮಶೇಖರ್, ಅಂದು 30 ಜಿಲ್ಲೆಗಳಲ್ಲೂ ಸಚಿವರು ಎಪಿಎಂಸಿ ಕಾಯ್ದೆ ತಿದ್ದುಪಡಿಯಿಂದ ಏನೆಲ್ಲ ಉಪಯೋಗವಾಗಲಿದೆ ಎಂಬ ಬಗ್ಗೆ ತಿಳಿವಳಿಕೆ ನೀಡುತ್ತಾರೆ ಎಂದಿದ್ದಾರೆ.

ಇದು ಹೇಗೆ ರೈತರಿಗೆ ಉಪಕಾರಿ (6ನೇ ಪುಟಕ್ಕೆ)

## ನಾಳೆ ರೈತರಿಗೆ ಪಿಎಂ - ಕಿಸಾನ್ ಕಂತು ಪಾವತಿ

ನವದೆಹಲಿ, ಡಿ. 23 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪಿಎಂ - ಕಿಸಾನ್ ಯೋಜನೆಯ ಮುಂದಿನ ಕಂತಿನ ಹಣಕಾಸು ನೆರವನ್ನು ಡಿಸೆಂಬರ್ 25ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ರೈತರಿಗೆ ಬಿಡುಗಡೆ ಮಾಡಲಿದ್ದಾರೆ ಎಂದು ಅವರ ಕಚೇರಿ ತಿಳಿಸಿದೆ. ಅಂದು ಒಂಭತ್ತು ಕೋಟಿ ಫಲಾನುಭವಿಗಳಿಗೆ 18 ಸಾವಿರ ಕೋಟಿ ರೂ.ಗಳ ಹಣವನ್ನು ವರ್ಗಾವಣೆ ಮಾಡಲಾಗುವುದು. ಇದೇ ದಿನ ಪ್ರಧಾನಿ ರೈತರ ಜೊತೆಗೂ ಸಂವಾದ ನಡೆಸಲಿದ್ದಾರೆ. (7ನೇ ಪುಟಕ್ಕೆ)

## ಮೆಟ್ರಿಕ್ ನಂತರದ ಎಸ್.ಸಿ. ವಿದ್ಯಾರ್ಥಿಗಳಿಗೆ 59 ಸಾವಿರ ಕೋಟಿ ರೂ. ವಿದ್ಯಾರ್ಥಿ ವೇತನ

ನವದೆಹಲಿ, ಡಿ. 23 – ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮುಂದಿನ ಐದು ವರ್ಷಗಳಲ್ಲಿ 59 ಸಾವಿರ ಕೋಟಿ ರೂ.ಗಳ ವಿದ್ಯಾರ್ಥಿ ವೇತನ ನೀಡುವ ಯೋಜನೆಗೆ ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಒಪ್ಪಿಗೆ ನೀಡಿದೆ.

4 ಕೋಟಿ ವಿದ್ಯಾರ್ಥಿಗಳಿಗೆ ಈ ಯೋಜನೆ ನೆರವಾಗಲಿದೆ. 59 ಸಾವಿರ ಕೋಟಿ ರೂ.ಗಳ ಪೈಕಿ ಕೇಂದ್ರ ಸರ್ಕಾರ ಶೇ.60ರಷ್ಟು ಹಣ ನೀಡಲಿದೆ. ಉಳಿದದ್ದನ್ನು ರಾಜ್ಯಗಳು ಭರಿಸಬೇಕಾಗುತ್ತದೆ.

## ಕಡಿಮೆ ಖರ್ಚಿನ, ಮೌಲ್ಯವರ್ಧನೆಯು ಜಾಣರ ಕೃಷಿ

### ರೈತರ ದಿನಾಚರಣೆ ಕಾರ್ಯಕ್ರಮದಲ್ಲಿ ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಕರೆ

ದಾವಣಗೆರೆ, ಡಿ. 23 - ಜಾಣರನ್ನೆಲ್ಲ ಬೇರೆ ಉದ್ಯಮಗಳಿಗೆ ಕಳಿಸಬೇಕು, ಉಪಯೋಗ ಇಲ್ಲದವರು ಕೃಷಿಯಲ್ಲಿರಬೇಕು ಎಂಬ ಭಾವನೆ ಬೇಡ. ಜಾಣತನದಿಂದ ಕೃಷಿ ಮಾಡಿದರೆ ಲಾಭದಾಯಕತೆ ಸಾಧ್ಯ ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ತಿಳಿಸಿದ್ದಾರೆ.

ಐ.ಸಿ.ಎಂ.ಆರ್. - ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ಇಲಾಖೆಯ ಆತ್ಮ ಯೋಜನೆ, ಕೃಷಿ ತಂತ್ರಜ್ಞರ ಸಂಸ್ಥೆ ಹಾಗೂ ಜಿಲ್ಲಾ ಕೃಷಿಕ ಸಮಾಜದ ವತಿಯಿಂದ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಯೋಜಿಸಲಾಗಿದ್ದ ರೈತರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಭತ್ತಕ್ಕೆ ಒಂದು ಸುತ್ತಿನ ಕೀಟನಾಶಕ ಸಿಂಪಡಣೆ ನಿಲ್ಲಿಸಿದರೆ, ಜಿಲ್ಲೆಯಲ್ಲಿ 14 ಕೋಟಿ ರೂ. ಉಳಿತಾಯವಾಗುತ್ತದೆ ಎಂದ ಅವರು, ಕೃಷಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಕೀಟನಾಶಕ, ಗೊಬ್ಬರ ಮುಂತಾದವುಗಳನ್ನು ಬಳಕೆ ಮಾಡಬೇಕು ಎಂದು ತಿಳಿಸಿದರು.



ಯೂರಿಯಾವನ್ನು ಗೊಬ್ಬರವಾಗಿ ಬಳಕೆ ಮಾಡದೇ ಕಳೆನಾಶಕವಾಗಿ ಬಳಸಲಾಗುತ್ತಿದೆ. ಇದು ರಸಗೊಬ್ಬರದ ಕೊರತೆಗೂ ಕಾರಣವಾಗಬಹುದು. ಜಿಲ್ಲೆಯಲ್ಲಿ 4,800 ಟನ್ ಯೂರಿಯಾ ಕಳೆನಾಶಕವಾಗಿ ಬಳಕೆಯಾಗಿದ್ದು, ಈ ಬಗ್ಗೆ ರೈತರು ಜಾಗೃತರಾಗಬೇಕು ಎಂದರು.

ಈ ಬಾರಿ ಮಳೆ ಹೆಚ್ಚಾಗಿದ್ದರಿಂದ ರೈತರು ಎಲೆಮರಚೆ ಕೀಟಕ್ಕೆ ಕೀಟನಾಶಕ ಸಿಂಪಡಿಸಲು ರೈತರಿಗೆ ಸಾಧ್ಯವಾಗಲಿಲ್ಲ. ಈ ಕಾರಣದಿಂದಾಗಿ ನಂತರ ಕಂದು ಜಿಗಿ ಹುಳು ಕಾಟ ಕಂಡು ಬರಲಿಲ್ಲ. ಪರಿಸರದಲ್ಲಿ ಮಧ್ಯ ಪ್ರವೇಶ ಮಾಡಿದಾಗ ಆಗುವ ಸಮಸ್ಯೆಗಳ ಬಗ್ಗೆ ರೈತರು ತಿಳಿದರೆ ಅತಿಯಾದ ಕೀಟನಾಶಕದ ಬಳಕೆ ತಪ್ಪುತ್ತದೆ ಎಂದು ಚಿಂತಾಲ್ ಹೇಳಿದರು.

ವೈಜ್ಞಾನಿಕ ಕೃಷಿ ಹಾಗೂ ಇಳುವರಿಗಳ ಮೌಲ್ಯವರ್ಧನೆ ಮಾಡುವುದರಿಂದ ಹೆಚ್ಚು ಲಾಭ ಸಿಗುತ್ತದೆ. ಹೀಗಾಗಿ ಕೃಷಿ ಜಾಣತನವನ್ನು ಬಯಸುತ್ತದೆ. ಉಪಯೋಗ ಇಲ್ಲದವರು ಕೃಷಿಗೆ ಬರಬೇಕು ಎಂಬ ಭಾವನೆ ಬೇಡ ಎಂದವರು ಕಿವಿಮಾತು ಹೇಳಿದರು.

ಕೃಷಿ ಇಲಾಖೆ ಉಪ ನಿರ್ದೇಶಕಿ ಹಂಸ ವೇಣಿ ಮಾತನಾಡಿ, ಕೃಷಿಯಲ್ಲಿ ಮಹಿಳೆಯ ಪಾತ್ರ ಹೆಚ್ಚಾಗಿದೆ. (5ನೇ ಪುಟಕ್ಕೆ)

## ಕೇರ್ನ್ ಮಧ್ಯಸ್ಥಿಕೆಯಲ್ಲಿ ಭಾರತಕ್ಕೆ ಸೋಲು

ನವದೆಹಲಿ ಡಿ. 23 – ಪೂರ್ವಾನ್ವಯವಾಗುವ ತೆರಿಗೆಗೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಮಧ್ಯಸ್ಥಿಕೆಯಲ್ಲಿ ಭಾರತ ಸರ್ಕಾರ ಪರಾಭವಗೊಂಡಿದ್ದು, ಕೇರ್ನ್ ಎನರ್ಜಿಗೆ 1.4 ಶತಕೋಟಿ ಡಾಲರ್ ಮರಳಿಸುವಂತೆ ಆದೇಶಿಸಲಾಗಿದೆ.

ಮೂವರು ಸದಸ್ಯರ ಟ್ರಿಬ್ಯೂನಲ್ ಸರ್ವಸಮ್ಮತಿಯಿಂದ ತೀರ್ಪು ನೀಡಿದೆ. ಇದರಲ್ಲಿ ಭಾರತದ ಸರ್ಕಾರದ ಪ್ರತಿನಿಧಿಯೂ ಇದ್ದರು. ಕೇರ್ನ್ ಇಂಡಿಯಾ 10, 247 ಕೋಟಿ ರೂ.ಗಳನ್ನು ಹಿಂದಿನ ತೆರಿಗೆಯಾಗಿ ನೀಡಬೇಕೆಂದು 2006-07ರಲ್ಲಿ ಆದೇಶಿಸಿದ್ದು ಸಿಂಧುವಾದ ಬೇಡಿಕೆಯಲ್ಲ ಎಂದು ತಿಳಿಸಲಾಗಿದೆ.

**ಬಡ್ಡಿ, ವೆಚ್ಚದ ಸಮೇತ 1.4 ಶತಕೋಟಿ ಡಾಲರ್ ಮರಳಿಸಲು ಆದೇಶ**

ಬ್ರಿಟನ್ ಜೊತೆ ಭಾರತವು ನ್ಯಾಯೋಚಿತ ಪರಿಗಣನೆಯ ಹೂಡಿಕೆ ಒಪ್ಪಂದ ಮಾಡಿಕೊಂಡಿತ್ತು. ಅದನ್ನು ಪಾಲಿಸಲು ಭಾರತ ವಿಫಲವಾಗಿದೆ ಎಂದು 582 ಪುಟಗಳ ಆದೇಶದಲ್ಲಿ ತಿಳಿಸಲಾಗಿದೆ.

ತೆರಿಗೆ ವಸೂಲಿಗಾಗಿ ಕಂಪನಿಯ ಷೇರುಗಳನ್ನು ಹಿಡಿದಿಟ್ಟುಕೊಳ್ಳಲಾಗಿದೆ ಹಾಗೂ ತೆರಿಗೆ ರೀಫಂಡ್ ತಡೆಯಲಾಗಿದೆ. ಇದನ್ನು ಸರ್ಕಾರ ಮರಳಿಸಬೇಕು ಎಂದೂ ತಿಳಿಸಲಾಗಿದೆ.

ಸರ್ಕಾರ ಕೇರ್ನ್‌ಗೆ ಆಗಿರುವ ಸಂಪೂರ್ಣ ನಷ್ಟವನ್ನು ಬಡ್ಡಿ ಹಾಗೂ ಸಂಧಾನದ ವೆಚ್ಚ ಸಮೇತ ನೀಡಬೇಕೆಂದು ಆದೇಶದಲ್ಲಿ ಹೇಳಲಾಗಿದೆ. ಈ ಆದೇಶವನ್ನು ಪ್ರಶ್ನಿಸಲು ಅವಕಾಶವಿಲ್ಲ ಎನ್ನಲಾಗುತ್ತಿದೆ. (5ನೇ ಪುಟಕ್ಕೆ)

## ಪೊಲೀಸರ ಸೋಗಿನಲ್ಲಿ ನಿವೃತ್ತ ಇಂಜಿನಿಯರ್‌ಗೆ ಮಂಕುಬೂದಿ

**ಚಿನ್ನಾಭರಣ ದೋಚಿ ವಂಚನೆ**

ದಾವಣಗೆರೆ, ಡಿ.23- ಪೊಲೀಸರ ಸೋಗಿನಲ್ಲಿ ಬಂದ ವಂಚಕರಿಬ್ಬರು ವಾಯು ವಿಹಾರ ಮುಗಿಸಿ ಮನೆಯತ್ತ ಸಾಗುತ್ತಿದ್ದ ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಓರ್ವರ ಬಳಿ ಇದ್ದ ಒಂದು ಲಕ್ಷ ರೂ. ಮೌಲ್ಯದ ಬಂಗಾರದ ಸರ, ಉಂಗುರವನ್ನು ಮಂಕು ಬೂದಿ ಎರಚಿ ದೋಚಿ ಪರಾರಿಯಾಗಿರುವ ಘಟನೆ ಇಲ್ಲಿನ ಬಡಾವಣೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿಂದು ಹಾಡಹಗಲೇ ನಡೆದಿದೆ.

ಎಂಸಿಸಿ ಎ ಬ್ಲಾಕ್ ವಾಸಿ ಎನ್.ಆರ್. (6ನೇ ಪುಟಕ್ಕೆ)

## ಮಹಾರಾಷ್ಟ್ರ : ಮರಾಠ ಸಮುದಾಯಕ್ಕೆ ಆರ್ಥಿಕ ಮೀಸಲಾತಿ

ಮುಂಬೈ, ಡಿ. 23 - ಮರಾಠ ಸಮುದಾಯಕ್ಕೆ ಆರ್ಥಿಕವಾಗಿ ದುರ್ಬಲ ವರ್ಗದಡಿ ಮೀಸಲಾತಿ ಕಲ್ಪಿಸಲು ಮಹಾರಾಷ್ಟ್ರ ಸಂಪುಟ ನಿರ್ಧರಿಸಿದೆ. ಇದರಿಂದಾಗಿ ಮರಾಠ ಸಮುದಾಯ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಪಡೆಯಲಿದೆ.

ಯಾವುದೇ ಮೀಸಲಾತಿ ವರ್ಗದಡಿ ಬರದ ಸಮುದಾಯಗಳ (5ನೇ ಪುಟಕ್ಕೆ)


## ಅಂದನೂರು ಮುಪ್ಪಣ್ಣ ಅವರ ಧರ್ಮಪತ್ನಿ ಅಂದನೂರು ಸಂಧ್ಯಾ ನಿಧನ



ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ ಉಪಾಧ್ಯಕ್ಷರಾದ ಶ್ರೀ ಅಂದನೂರು ಮುಪ್ಪಣ್ಣ ಅವರ ಧರ್ಮಪತ್ನಿ **ಶ್ರೀಮತಿ ಅಂದನೂರು ಸಂಧ್ಯಾ** ಅವರು ದಿನಾಂಕ 23.12.2020ರ ಬುಧವಾರ ಬೆಳಗ್ಗೆ 10.30 ಗಂಟೆಗೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 60 ವರ್ಷ ವಯಸ್ಸಾಗಿತ್ತು. ಮೃತರು ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ 24.12.2020ರ ಗುರುವಾರ ಬೆಳಿಗ್ಗೆ 10 ರ ವರೆಗೆ ಎಂ.ಸಿ.ಸಿ. 'ಬಿ' ಬ್ಲಾಕ್, 7 ನೇ ಮೇನ್, 4 ನೇ ಕ್ರಾಸ್ ಸ್ವಿಮ್ಮಿಂಗ್ ಪೂಲ್ ಹಿಂಭಾಗ, ದಾವಣಗೆರೆ ಇಲ್ಲಿರುವ ಮೃತರ ಸ್ವಗೃಹದಲ್ಲಿ ಇರಿಸಲಾಗಿದೆ. ನಂತರ ದಾವಣಗೆರೆ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

– ದುಃಖತಪ್ತ ಕುಟುಂಬ ವರ್ಗ


## ಕೆರೆಗಳಿಗಾಗಿ ದೂಡಾದಿಂದ 12 ಕೋಟಿ ರೂ ಮೀಸಲು

### ಸಂಸದ ಜಿ.ಎಂ.ಸಿದ್ದೇಶ್ವರ

ದಾವಣಗೆರೆ, ಡಿ. 23- ಸಮೀಪದ ಬಾತಿ ಕೆರೆ, ಆವರಗೆರೆ ಕೆರೆ ಹಾಗೂ ಟಿವಿ ಸ್ಟೇಷನ್ ಕೆರೆ ಅಭಿವೃದ್ಧಿಗೆ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ 12 ಕೋಟಿ ರೂ. ಮೀಸಲು ಇಡಲಾಗಿದೆ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಎದುರಿನ ಪಿಬಿ ರಸ್ತೆಯಿಂದ ಬಾಪೂಜಿ ಎಂಬಿಎ ಕಾಲೇಜು ಕಾಂಪೌಂಡ್‌ಗೆ ಹೋಗುವ ರಸ್ತೆಯ ಅಭಿವೃದ್ಧಿಗೆ 3.75 ಕೋಟಿ ರೂ. ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ರಸ್ತೆ, ಆರ್ಚ್(ಕಮಾನು), ಡ್ರೈನೇಜ್ ನಿರ್ಮಾಣವನ್ನು ಹೊಂದಿರುವ ಈ ಕಾಮಗಾರಿ



ಇನ್ನೂ ನಾಲ್ಕು ತಿಂಗಳಲ್ಲಿ ಪೂರ್ಣಗೊಂಡು ಲೋಕಾರ್ಪಣೆ ಗೊಳ್ಳಲಿದೆ ಎಂದು ಹೇಳಿದರು.

ದೂಡಾದಿಂದ ವೇಗವಾಗಿ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ. ಪಿಬಿ ರಸ್ತೆಯ ಎರಡೂ ಬದಿಯಲ್ಲಿ ಎಲ್‌ಇಡಿ ದೀಪದ ವ್ಯವಸ್ಥೆ ಮತ್ತು ದುರ್ಗಾಂಬಿಕಾ ದೇವಸ್ಥಾನದ ಬಳಿ ಹೈಮಾಸ್ಟ್ ದೀಪ ವ್ಯವಸ್ಥೆ ಮಾಡಲಾಗಿದೆ. ಇನ್ನೂ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳು ದೂಡಾ ಅಧ್ಯಕ್ಷರ ಮತ್ತು ಸದಸ್ಯರ ಒತ್ತಾಸೆಯ ಮೇರೆಗೆ ನಡೆಯಲಿವೆ ಎಂದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಪ್ರಾಧಿಕಾರದಿಂದ ಈಗಾಗಲೇ ಐದು ಕೋಟಿ ವೆಚ್ಚದ ಕಾಮಗಾರಿ ನಡೆದಿದ್ದು, ಇದು ಬರೀ (7ನೇ ಪುಟಕ್ಕೆ)

# ಪಾರದರ್ಶಕ ಗ್ರಾ.ಪಂ.ಚುನಾವಣೆಗೆ ತಾಲ್ಲೂಕಾಡಳಿತ ಸಿದ್ಧತೆ

## ಹರಿಹರ

ಹರಿಹರ,ಡಿ.23- ಡಿ. 27 ರಂದು ಬೆಳಗ್ಗೆ 7 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಹರಿಹರ ತಾಲ್ಲೂಕಿನ 23 ಗ್ರಾಮ ಪಂಚಾಯ್ತಿಗಳ ಚುನಾವಣೆಯನ್ನು ಯಾವುದೇ ಲೋಪ ದೋಷಗಳಾಗದಂತೆ ಶಾಂತಿಯುತ ಮತ್ತು ಪಾರದರ್ಶಕವಾಗಿ ನಡೆಸಲು ತಾಲ್ಲೂಕು ಆಡಳಿತದಿಂದ ಎಲ್ಲಾ ರೀತಿಯ ಸಿದ್ಧತೆ ಮಾಡಲಾಗಿದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದರು.

ನಗರದ ತಾಲ್ಲೂಕು ಕಚೇರಿಯ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಎರಡನೇ ಹಂತದಲ್ಲಿ ನಡೆಯುವ ಹರಿಹರ ತಾಲ್ಲೂಕಿನ ಗ್ರಾಮ ಪಂಚಾಯ್ತಿ ಚುನಾವಣೆ 23 ಗ್ರಾಮ ಪಂಚಾಯ್ತಿಗಳ 113 ಕ್ಷೇತ್ರಗಳಲ್ಲಿ 299 ಸ್ಥಾನಗಳಿಗೆ 152 ಮತಗಟ್ಟೆ ಕೇಂದ್ರಗಳಲ್ಲಿ ನಡೆಯಲಿದೆ. ಒಟ್ಟು ಮತದಾರರು 1,09, 312. ಪುರುಷ ಮತದಾರರು 55,189, ಮಹಿಳಾ ಮತದಾರರು 54,123 ಇದ್ದಾರೆ.

1999 ನಾಮಪತ್ರಗಳು ಸಲ್ಲಿಕೆ ಆಗಿದ್ದು, ಅದರಲ್ಲಿ 5 ನಾಮಪತ್ರಗಳು ತಿರಸ್ಕೃತಗೊಂಡಿವೆ. 55 ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆಯಾಗಿದ್ದು, ಅಂತಿಮವಾಗಿ ಕಣದಲ್ಲಿ 777 ಅಭ್ಯರ್ಥಿಗಳು ಉಳಿದಿದ್ದಾರೆ. ಅದರಲ್ಲಿ 420 ಸಾಮಾನ್ಯ ಅಭ್ಯರ್ಥಿಗಳು, 357 ಮಹಿಳಾ ಮೀಸಲು ಅಭ್ಯರ್ಥಿಗಳು ಒಟ್ಟಾರೆಯಾಗಿ 169 ಪುರುಷರು 182 ಮಹಿಳಾ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಇದ್ದಾರೆ.

ಮಹಿಳಾ ಅಭ್ಯರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿರುವುದು ವಿಶೇಷ. ಎಸ್.ಸಿ. ಸಾಮಾನ್ಯ 22, ಎಸ್.ಸಿ. ಮಹಿಳೆ 30, ಎಸ್.ಟಿ. ಸಾಮಾನ್ಯ 13, ಎಸ್.ಟಿ. ಮಹಿಳೆ 28, ಒಬಿಸಿ ಎ ವರ್ಗ 22, ಓಬಿಸಿ ಎ ವರ್ಗ ಮಹಿಳೆ 38, ಓಬಿಸಿ ಬಿ ವರ್ಗ 9 ಒಬಿಸಿ ಬಿ ವರ್ಗ ಮಹಿಳೆ 6, ಸಾಮಾನ್ಯ 103, ಸಾಮಾನ್ಯ ಮಹಿಳೆ 80 ಹೀಗೆ ಮೀಸಲಾತಿ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

152 ಮತಗಟ್ಟೆ ಕೇಂದ್ರಗಳಲ್ಲಿ 34 ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಮತಗಟ್ಟೆ ಕೇಂದ್ರಗಳನ್ನು ಗುರುತಿಸಲಾಗಿದೆ. 804 ಚುನಾವಣಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಅದರಲ್ಲಿ 400 ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ. ಇನ್ನೂ 400 ಸಿಬ್ಬಂದಿಗಳಿಗೆ ಸಹಾಯಕ ಸಿಬ್ಬಂದಿ ಎಂದು ಗುರುತಿಸಲಾಗಿದೆ.


ತಹಶೀಲ್ದಾರ್ ರಾಮಚಂದ್ರಪ್ಪ

ತಾಲ್ಲೂಕಿನ ಗ್ರಾಮಗಳಲ್ಲಿ ನಡೆಯುವ ವಾರದ ಸಂತೆ ಹಾಗೂ ಬೆಳ್ಳೂಡಿ ಗ್ರಾಮದಲ್ಲಿ ಆಂಜನೇಯ ಸ್ವಾಮಿಯ ಕಾರ್ತಿಕ ಮಹೋತ್ಸವ ಆಚರಣೆ ನಿಷೇಧ ಮಾಡಲಾಗಿದೆ. ಸೈನಿಕ ಸೇವೆ ಮಾಡುತ್ತಿರುವ 42 ಜನರಿಗೆ ಮತ್ತು ಚುನಾವಣೆ ಕರ್ತವ್ಯದಲ್ಲಿ ನಿರತರಾದ 135 ಸಿಬ್ಬಂದಿಗಳಿಗೆ ಪೋಸ್ಟಲ್ ಮತದಾನ ಮಾಡಲಿಕ್ಕೆ ವ್ಯವಸ್ಥೆ ಮಾಡಲಾಗಿದೆ. ಸುಮಾರು 35 ಬಸ್ ವ್ಯವಸ್ಥೆ ಸೇರಿದಂತೆ ಮತಗಟ್ಟೆ ಕೇಂದ್ರಕ್ಕೆ ಒಬ್ಬರಂತೆ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಕ್ಷೇತ್ರದ 23 ಗ್ರಾಮಗಳಲ್ಲಿ ದಿನಾಂಕ 27 ರಂದು ನಡೆಯುವ ಚುನಾವಣೆಗೆ ಯಾವುದೇ ರೀತಿಯ ತೊಂದರೆ ಆಗದಂತೆ ನಡೆಸಲು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಹಶೀಲ್ದಾರ್ ರಾಮಚಂದ್ರಪ್ಪ ಹೇಳಿದರು. ಈ ಸಂದರ್ಭದಲ್ಲಿ ಕಚೇರಿಯ ಸಿಬ್ಬಂದಿಗಳು ಹಾಜರಿದ್ದರು.

# ಒಂಟಿಹಾಳ್ ಗ್ರಾಮದಲ್ಲಿ ಮರು ಮತದಾನಕ್ಕೆ ಆಗ್ರಹ



ದಾವಣಗೆರೆ, ಡಿ.23- ಮೊದಲ ಹಂತದಲ್ಲಿ ನಡೆದ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ನಡೆದ ಗೊಂದಲದಿಂದಾಗಿ ಸರಿಯಾದ ರೀತಿ ಮತದಾನ ನಡೆಯದ ಹಿನ್ನೆಲೆಯಲ್ಲಿ ಮರು ಮತದಾನಕ್ಕೆ ಅವಕಾಶ ಮಾಡಿಕೊಡುವಂತೆ ತಾಲ್ಲೂಕಿನ ಬಾಡ ಗ್ರಾಮ ಪಂಚಾಯತ್ ವ್ಯಾಪ್ತಿಯ ಒಂಟಿಹಾಳ್ ಗ್ರಾಮಸ್ಥರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ನಿನ್ನೆ ನಡೆದ ಗ್ರಾಪಂ ಚುನಾವಣೆಯ ಸಂದರ್ಭದಲ್ಲಿ ವಿಠಲಾಪುರ ಗ್ರಾಮದಲ್ಲಿ ಮತಗಟ್ಟೆಯನ್ನು ಅಳವಡಿಸಲಾಗಿದ್ದು, ಒಂಟಿಹಾಳ್ ಗ್ರಾಮಸ್ಥರು ಅಲ್ಲಿಗೆ ತೆರಳಿ ಮತ ಹಾಕುವ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಅಲ್ಲಿಗೆ ಹೋದರೆ ಮತದಾರರ ಮತಪಟ್ಟಿಯನ್ನೇ ಕೊಡದೆ ಗೊಂದಲ ಸೃಷ್ಟಿಯಾಗಿತ್ತು. ಮತಪಟ್ಟಿ ತರುವ ವೇಳೆಗಾಗಲೇ ತಡವಾಗಿದ್ದರಿಂದ ವೃದ್ಧರು, ಮಹಿಳೆಯರು, ವಿಕಲಚೇತನರು ಕಾದು, ಬೇಸರಗೊಂಡು ಮತ ಹಾಕಲು ನಿರಾಕರಿಸಿ ಅಲ್ಲಿಂದ ವಾಪಸ್ಸಾದರು. ಆ ಸಂದರ್ಭದಲ್ಲಿ ಡಿಸಿ, ಎಸ್ಪಿ ಮತದಾರರಿಗೆ ಮನವಿ ಮಾಡಿದರೂ ಸಹ ಅಲ್ಲಿ ಸರಿಯಾದ ಮತದಾನವೇ ನಡೆಯಲಿಲ್ಲ ಎಂದು ಗ್ರಾಮಸ್ಥರು ಬೇಸರ ವ್ಯಕ್ತಪಡಿಸಿದ್ದಾರೆ.

ಒಂಟಿಹಾಳ್ ಗ್ರಾಮದಲ್ಲಿ 242 ಮತದಾರರಿದ್ದು, ಚುನಾವಣಾಧಿಕಾರಿಗಳು ಕೊಟ್ಟಂತಹ ಮತಪಟ್ಟಿಯಲ್ಲಿ ಕೇವಲ 170 ಜನರ ಹೆಸರಿತ್ತು. ಇದರಲ್ಲಿ ಕೇವಲ 130 ಜನರು ಮಾತ್ರ ಮತ ಚಲಾಯಿಸಿದ್ದಾರೆ. ಈ ಹಿಂದಿನಿಂದಲೂ ಪ್ರತ್ಯೇಕ ಮತಗಟ್ಟೆ ಮತ್ತು ವಾರ್ಡ್ ನೀಡುವಂತೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಮತದಾನದ ವೇಳೆ ಸಾಕಷ್ಟು ಗೊಂದಲ ಉಂಟಾಗಲು ಇದೇ ಕಾರಣವಾಗಿದ್ದು, ಕಾರಣ ಮರು ಮತದಾನಕ್ಕೆ ಅವಕಾಶ ನೀಡುವಂತೆ ಗ್ರಾಮಸ್ಥರು ಕೋರಿದ್ದಾರೆ.

# ಕೆ.ಎಸ್. ಪವಿತ್ರಗೆ ಪಿಎಚ್‌ಡಿ ಪದವಿ



ದಾವಣಗೆರೆ, ಡಿ.23- ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂ.ಐ.ಟಿ) ಯ ರಸಾಯನಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ ಕು. ಕೆ.ಎಸ್. ಪವಿತ್ರ ಅವರಿಗೆ ಮಣಿಪಾಲ ವಿಶ್ವವಿದ್ಯಾನಿಲಯದಿಂದ ಪಿಎಚ್‌ಡಿ ಪದವಿ ಲಭಿಸಿದೆ.

ಎಂಐಟಿಯ ಪ್ರಾಧ್ಯಾಪಕರಾದ ಡಾ. ಎಂ.ಪಿ. ಯಶೋಧ ಅವರ ಮಾರ್ಗದರ್ಶನ ಹಾಗೂ ಡಾ. ಫಜಿವುಲ್ಲಾ ಅವರ ಸಹ ಮಾರ್ಗದರ್ಶನದಲ್ಲಿ ಮಂಡಿಸಿದ 'ಎ ಸ್ಟಡಿ ಆನ್ ದಿ ಎಫೆಕ್ಟ್ ಆಫ್ ಪಾಲಿಮರ್ ಡಿಸ್‌ಪರ್‌ಸೆಂಟ್ ಆನ್ ಥರ್ಮಲ್ ಕಂಡೆಕ್ಟಿವಿಟಿ ಆಫ್ ಮೆಟಲ್ / ಮೆಟಲ್ ಆಕ್ಸೈಡ್ ಬೇಸ್ಡ್ ನ್ಯಾನೊಫ್ಲೂಯಿಡ್ಸ್' ವಿಷಯ ಕುರಿತ ಮಹಾಪ್ರಬಂಧಕ್ಕೆ ಮಣಿಪಾಲ್ ವಿವಿ ಈ ಪದವಿ ನೀಡಿದೆ. ಪವಿತ್ರ, ನಗರದ ನ್ಯಾಯವಾದಿ ಕೆ.ಜಿ.ಕೆ. ಸ್ವಾಮಿ ಅವರ ಸಹೋದರಿ. ಅವರು ಮಂಡಿಸಿದ ಹಲವು ಸಂಶೋಧನಾ ಪ್ರಬಂಧಗಳು ಅಂತರರಾಷ್ಟ್ರೀಯ ನಿಯತಕಾಲಿಕಗಳಲ್ಲಿ ಪ್ರಕಟಗೊಂಡಿವೆ.

# ಮಲೇಬೆನ್ನೂರಿನಲ್ಲಿ ಜನವರಿ 4ಕ್ಕೆ ಭದ್ರಾ ಕಾಡಾ ಸಭೆ


ಕೊನೆ ಭಾಗದ ರೈತರ ಮನವಿಗೆ ಸ್ಪಂದಿಸಿದ ಭದ್ರಾ ಕಾಡಾ ಅಧ್ಯಕ್ಷರಿಗೆ ಅಭಿನಂದನೆ

ಮಲೇಬೆನ್ನೂರು, ಡಿ.23- ಭದ್ರಾ ಕಾಡಾ ನೀರಾವರಿ ಸಲಹಾ ಸಮಿತಿ ಸಭೆಯನ್ನು ಇದೇ ಮೊದಲ ಬಾರಿಗೆ ಮಲೇಬೆನ್ನೂರಿನಲ್ಲಿ ಹಮ್ಮಿಕೊಳ್ಳುವ ಮೂಲಕ ಭದ್ರಾ ಕಾಡಾ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಅವರು ಕೊನೆ ಭಾಗದ ರೈತರ ಬೇಡಿಕೆಗೆ ಸ್ಪಂದಿಸಿದ್ದಾರೆ.

ಸೋಮವಾರ ಮಲೇಬೆನ್ನೂರಿಗೆ ಭೇಟಿ ನೀಡಿದ್ದ ಶ್ರೀಮತಿ ಪವಿತ್ರ ರಾಮಯ್ಯ ಅವರಿಗೆ ಹೊಳೆಸಿರಿಗೆರೆಯ ಪಾಲಾಕ್ಷಪ್ಪ, ಆರ್.ಟಿ.ಸೋಮಶೇಖರ್, ಎಂ.ತಿಪ್ಪೇರುದ್ರಪ್ಪ ಮತ್ತು ಎಪಿಎಂಸಿ ಸದಸ್ಯ ಜಿ. ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಕೊಕ್ಕನೂರು ಸೋಮಶೇಖರ್, ಕುಣೆಬೆಳಕೆರೆ ಅಂಜಿನಪ್ಪ ಮಲೇಬೆನ್ನೂರಿನಲ್ಲಿ ಕಾಡಾ ಸಭೆ ನಡೆಸುವಂತೆ ಒತ್ತಾಯಿಸಿದ್ದರು.

ಈ ಬಗ್ಗೆ ಒಂದೆರಡು ದಿನಗಳಲ್ಲಿ ತಿಳಿಸುತ್ತೇನೆಂದು ಹೇಳಿ ಹೋಗಿದ್ದ ಪವಿತ್ರ ರಾಮಯ್ಯ ಅವರು ಬರುವ ಜನವರಿ 4 ರಂದು ಬೆಳಿಗ್ಗೆ 11 ಕ್ಕೆ ಮಲೇಬೆನ್ನೂರಿನ ನೀರಾವರಿ ಕಚೇರಿಯಲ್ಲಿ ಭದ್ರಾ ಕಾಡಾ ಸಭೆ ನಿಗದಿ ಮಾಡುವ ಮೂಲಕ ರೈತರಿಗೆ ಕೊಟ್ಟ ಮಾತನ್ನು ಈಡೇರಿಸಿದ್ದಾರೆ.

ಭದ್ರಾ ಕಾಡಾ ಅಧ್ಯಕ್ಷರ ನಿರ್ಧಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಕೊನೆ ಭಾಗದ ರೈತರು ಬೇಸಿಗೆ ಬೆಳೆಯಲ್ಲೂ ಅಧ್ಯಕ್ಷರ ಕಾಳಜಿ ಹೀಗೆ ಇರಲೆಂದು ಮನವಿ ಮಾಡಿದ್ದಾರೆ.

# ಅವಶ್ಯಕತೆಗಿಂತ ಹೆಚ್ಚು ಯೂರಿಯಾ ಬಳಸಬೇಡಿ

## ರಾಣೇಬೆನ್ನೂರು : ರೈತ ದಿನಾಚರಣೆಯಲ್ಲಿ ರೈತರಿಗೆ ಗೌಡಪ್ಪಳವರ ಕಿವಿಮಾತು



ರಾಣೇಬೆನ್ನೂರು, ಡಿ.23- ಅವಶ್ಯಕತೆಗಿಂತ ಹೆಚ್ಚು ಯೂರಿಯಾ ಗೊಬ್ಬರ ಬಳಸಿದರೆ ನಳನಳಿಸುವ ಪೈರು ಕ್ರಿಮಿಕೀಟಗಳನ್ನು ಆಕರ್ಷಿಸುತ್ತದೆ. ಜೊತೆಗೆ ಮಾರುಕಟ್ಟೆಯಲ್ಲಿ ಗೊಬ್ಬರದ ಅಭಾವ ಉಂಟಾಗುತ್ತದೆ ಎಂದು ಕೃಷಿ ಇಲಾಖೆ ಉಪನಿರ್ದೇಶಕ ಬಿ.ಎಚ್. ಗೌಡಪ್ಪಳವರ ಹೇಳಿದರು.

ರೈತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೇವಲ ಆರು ತಿಂಗಳು ಪ್ರಧಾನಿಯಾಗಿದ್ದ ಚೌಧರಿ ಚರಣಸಿಂಗ್ ರೈತಪರವಾಗಿ ಅನೇಕ ಮಸೂದೆಗಳನ್ನು ತಂದರು. ಅವರಲ್ಲಿದ್ದಂತಹ ರೈತ ಪರ ಚಿಂತನೆಗಳಿಂದಾಗಿ ಅವರ ಜಯಂತಿಯು ರೈತ ದಿನಾಚರಣೆಯಾಗಿದೆ ಎಂದರು.

ಸಗಣಿ ಗೊಬ್ಬರ ಬಳಸದೆ ಅತಿಯಾಗಿ ರಾಸಾಯನಿಕ ಗೊಬ್ಬರ ಬಳಸುವುದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ. ಮಣ್ಣು ಪರೀಕ್ಷೆ ಮಾಡಿಸಿ, ಅದರಲ್ಲಿಲ್ಲದ ಶಕ್ತಿವರ್ಧಕಗಳನ್ನು ಕೊಟ್ಟು ಫಲವತ್ತತೆ ಹೆಚ್ಚಿಸಬೇಕು. ಇಳಿಜಾರಿಗೆ ಅಡ್ಡಲಾಗಿ ಬಿತ್ತುವ, ಬದು ನಿರ್ಮಿಸುವ ಮೂಲಕ ಮಣ್ಣು ನೀರಿನ ಜೊತೆ ಹರಿದು ಹೋಗದಂತೆ ತಡೆಯಬೇಕು. ಈ ಎಲ್ಲ ಕಾರ್ಯಗಳಿಗೂ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದೆ ಎಂದು ಗೌಡಪ್ಪಳವರ ಹೇಳಿದರು.

ನಿವೃತ್ತ ಕೃಷಿ ಅಧಿಕಾರಿ ಶಾಮನೂರು ಮಾತನಾಡಿ, ಅತಿಯಾದ ತಂತ್ರಜ್ಞಾನದ ಬಳಕೆ ರೈತರನ್ನು ತೊಂದರೆಗೀಡು ಮಾಡುತ್ತದೆ. ರಾಸಾಯನಿಕ ಹಾಗೂ ಕ್ರಿಮಿನಾಶಕಗಳ ಬಳಕೆ, ಇಲ್ಲದ ಬೆಳೆಗಳ ಬದಲಾವಣೆ, ಅತಿಯಾದ ನೀರಾವರಿ ಹೀಗೆ ಎಲ್ಲವನ್ನು ಅತಿಯಾಗಿ ಬಳಕೆ ಮಾಡಿ ಭೂಮಿ ಬರಡಾಗುತ್ತಿದೆ. ತನ್ನ ಮನೆ ಬಳಕೆಗೆ ಬೇಕಾಗುವ ದವಸ ಧಾನ್ಯಗಳನ್ನು ಬೆಳೆದುಕೊಳ್ಳದೇ ಕೇವಲ ವಾಣಿಜ್ಯ ಬೆಳೆಗಳ ಬೆನ್ನು ಹತ್ತಿರುವುದು ಎಷ್ಟು ಸರಿ? ಈ ಎಲ್ಲವುಗಳಿಂದ ಹೊರಬಂದು ರೈತ ಗಟ್ಟಿ ಬದುಕು ಕಟ್ಟಿಕೊಳ್ಳಬೇಕು ಎಂದು ಕರೆ ನೀಡಿದರು.

ಕೃಷಿಕ ಸಮಾಜದ ಜಿಲ್ಲಾಧ್ಯಕ್ಷ ಎಂ.ಎಸ್. ಪಾಟೀಲ, ನಿರ್ದೇಶಕರಾದ ಮಂಜುಳಾ ಬಣಕಾರ, ವಿಷ್ಣು ಜಿಂಗಾಡೆ, ಶಿವಪ್ಪ ಆನ್ವೇರಿ ಇನ್ನಿತರರಿದ್ದರು.

# ಅಪ್ರಾಪ್ತೆಯ ಬಾಲ್ಯ ವಿವಾಹ ತಡೆ

ದಾವಣಗೆರೆ, ಡಿ.23- ಅಪ್ರಾಪ್ತೆಯ ಮದುವೆಗೆ ಸಿದ್ಧತೆ ನಡೆದಿರುವ ಬಗ್ಗೆ ಬಂದ ದೂರಿನ ಹಿನ್ನೆಲೆಯಲ್ಲಿ ಬಾಲ್ಯ ವಿವಾಹ ತಡೆಯುವಲ್ಲಿ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಡಾನ್ ಬಾಸ್ಕೋ ತಂಡ ಯಶಸ್ವಿಯಾಗಿದೆ.

ಹದಡಿ ಪೊಲೀಸ್ ಠಾಣಾ ವ್ಯಾಪ್ತಿಯ 25 ವರ್ಷದ ಯುವಕನೊಂದಿಗೆ ಹರಿಹರ ನಗರದ ವಾರ್ಡೊಂದರ ಅಪ್ರಾಪ್ತ ಬಾಲಕಿ ಮದುವೆಗೆ ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಸಹಾಯವಾಣಿಗೆ ದೂರು ಬಂದಿತ್ತು. ದೂರಿನ ಹಿನ್ನೆಲೆಯಲ್ಲಿ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಡಾನ್ ಬಾಸ್ಕೋ ತಂಡದ ಸಂಯೋಜಕ ಟಿ.ಎಂ. ಕೊಟ್ರೇಶ್, ಸಹಾಯವಾಣಿ ಕಾರ್ಯಕರ್ತ ಡಿ. ಮಂಜುನಾಥ, ಶಿಶು ಅಭಿವೃದ್ಧಿ ಯೋಜನೆಯ ಮೇಲ್ವಿಚಾರಕರಾದ ಶೈಲಾ ಎಸ್. ಮೈದೂರು ತಂಡವು ಅಪ್ರಾಪ್ತೆ ಮನೆಗೆ ಹೋಗಿ ಬಾಲಕಿಯ ತಾಯಿ, ಸಂಬಂಧಿಕರನ್ನು ಭೇಟಿ ಮಾಡಿ ಬಾಲ್ಯ ವಿವಾಹ ಮಾಡದಂತೆ ಮನವೊಲಿಸಿದರು.

ಅಪ್ರಾಪ್ತ ಬಾಲಕಿಯ ಶಾಲಾ ದಾಖಲೆಯನ್ನು ಸಂಗ್ರಹಿಸಿ, ಪರಿಶೀಲಿಸಿದಾಗ ಬಾಲಕಿಯ ವಯಸ್ಸು 16 ವರ್ಷ 4 ತಿಂಗಳಷ್ಟೇ ಆಗಿತ್ತು. ಬಾಲ್ಯ ವಿವಾಹ ನಿಷೇಧ ಕಾಯ್ದೆ ಪ್ರಕಾರ ಬಾಲ್ಯ ವಿವಾಹ ಮಾಡಿದರೆ 1 ಲಕ್ಷ ರೂ. ದಂಡ, 1 ವರ್ಷಕ್ಕೆ ಕಡಿಮೆ ಇಲ್ಲದಂತೆ 2 ವರ್ಷಕ್ಕೆ ವಿಸ್ತರಿಸಬಹುದಾದ ಜೈಲು ಶಿಕ್ಷೆಯಾಗಲಿದೆ ಎಂಬ ವಿಚಾರವನ್ನು ಅಪ್ರಾಪ್ತೆಯ ತಾಯಿ, ಸಂಬಂಧಿಗಳಿಗೆ ಎಚ್ಚರಿಕೆ ನೀಡಿ, ಕಾನೂನು ಬಗ್ಗೆ ಅರಿವು ಮೂಡಿಸಲಾಯಿತು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ನಿರ್ಮಲ ಸಮ್ಮುಖದಲ್ಲಿ 20 ರು.ಗಳ ಛಾಪಾ ಕಾಗದದಲ್ಲಿ ಅಪ್ರಾಪ್ತೆಯ ತಾಯಿ ಹಾಗೂ ಸಂಬಂಧಿಗಳಿಂದ ಮುಚ್ಚಳಿಕೆ ಪತ್ರ ಪಡೆದಿದ್ದಾರೆ.

# ಸೇಂಟ್ ಪಾಲ್ಸ್ ಕೆಡೆಟ್‌ಗಳಿಂದ ಪುತ್ಥಳಿಗಳ ಸ್ವಚ್ಛತೆ




ದಾವಣಗೆರೆ, ಡಿ.23- ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ ನಗರದ ಪುತ್ಥಳಿಗಳ ಸ್ವಚ್ಛತೆ ಕಾರ್ಯಕ್ರಮವನ್ನು ಸೇಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯ 33 ಕರ್ನಾಟಕ ಬೆಟಾಲಿಯನ್ ಘಟಕದ ಕೆಡೆಟ್‌ಗಳಾದ ಬಿ.ಎಸ್. ಶ್ವೇತಾ, ಧನ್ಯಶ್ರೀ ನಾಡಿಗೇರ್ ಹಾಗೂ ಎಂ. ಅವನಿ ಅವರು ಕೈಗೊಂಡಿದ್ದು, ನಗರದ ವಿವಿಧ ಪುತ್ಥಳಿಗಳನ್ನು ಸ್ವಚ್ಛಗೊಳಿಸಿದರು.

# ಕಾಯರ್ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಮುಖ್ಯ

ದಾವಣಗೆರೆ, ಡಿ.23- ತೆಂಗು ನಾರಿನ ಉದ್ಯಮ ಪ್ರಮುಖವಾಗಿ ರಫ್ತು ಮಾರ್ಗವನ್ನೇ ಹೆಚ್ಚು ಅವಲಂಬಿಸಿರುವುದರಿಂದ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವುದು ಇಂದಿನ ಆದ್ಯತೆಯಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಕಾಯರ್ ಮಂಡಳಿಯ 235 ನೇ ಆಡಳಿತ ಮಂಡಳಿ ಸಭೆಯ ವೆಬಿನಾರ್ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯಗಳನ್ನು ಕೇಂದ್ರವನ್ನಾಗಿಸಿಕೊಂಡು ಫ್ರಾಂಚೈಸಿಗಳನ್ನು ಹೆಚ್ಚಳ ಮಾಡುವುದು, ಹೆಚ್ಚು ಹೆಚ್ಚು ಕಾಯರ್ ಕ್ಲಸ್ಟರ್‌ಗಳನ್ನು ರಚನೆ ಮಾಡುವತ್ತ ಗಮನ ಹರಿಸುವಂತೆ ಕಾಯರ್ ಮಂಡಳಿಯ ಅಧಿಕಾರಿಗಳಿಗೆ ಸಲಹೆ ನೀಡಿದರು.

ಹಿರಿಯೂರು ಸುತ್ತಮುತ್ತ ಸಿಗುವ ತೆಂಗಿನ ನಾರು ಅತಿ ಉತ್ಕೃಷ್ಟದ್ದಾಗಿದ್ದು


ಸಂಸದ ಸಿದ್ದೇಶ್ವರ ಅಭಿಮತ

ರಾಜ್ಯದಲ್ಲಿ ದೊರೆಯುವ ಯಾವುದೇ ತೆಂಗಿನ ನಾರಿಗೆ ಹೋಲಿಕೆ ಮಾಡಿದಾಗ ಅತಿ ಹೆಚ್ಚಿನ ಇಳುವರಿ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಅಥವಾ ದಾವಣಗೆರೆಯಲ್ಲಿ ತೆಂಗು ನಾರಿನ ಉತ್ಪನ್ನಗಳ ಪ್ರದರ್ಶನ ಕೇಂದ್ರ ಹಾಗೂ ತರಬೇತಿ ಕೇಂದ್ರವನ್ನು ತೆರೆಯುವಂತೆ ಹಾಗೂ ಅಗತ್ಯವಾದ 2 ಎಕರೆ ಜಮೀನನ್ನು ಒದಗಿಸುವುದಾಗಿ ಈ ಹಿಂದೆ ಕಾಯರ್ ಮಂಡಳಿಯ ಚೇರ್ಮನ್‌ಗೆ ಮನವಿ ಮಾಡಲಾಗಿದ್ದು, ಈ ಸಂಬಂಧ ಮಾಹಿತಿ ಪಡೆದರು.

ಕಾಯರ್ ಮಂಡಳಿಯ ಛೇರ್ಮನ್ ಸುಧೀರ್ ಗಾರ್ಗ್ ಪ್ರತಿಕ್ರಿಯಿಸಿ, ಆ ಭಾಗದಲ್ಲಿ ನಾರಿನ ಉತ್ಪನ್ನಗಳನ್ನು ಹೆಚ್ಚು ಪರಿಚಯಿಸುವ ದೃಷ್ಟಿಯಿಂದ ಪ್ರದರ್ಶನ ಕೇಂದ್ರ ಹಾಗೂ ತರಬೇತಿ ಕೇಂದ್ರ ತೆರೆಯುವ ಬಗ್ಗೆ ಮಂಡಳಿ ಹೆಚ್ಚು ಉತ್ಸುಕತೆ ಹೊಂದಿದೆ. ಈ ಬಗ್ಗೆ ಮಂಡಳಿ ಸಕಾರಾತ್ಮಕ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಸಭೆಯಲ್ಲಿ ತಿಳಿಸಿದರು. ಈ ಕುರಿತು ವಿಸ್ತೃತವಾದ ವರದಿಯನ್ನು ಸಚಿವಾಲಯಕ್ಕೆ ಸಲ್ಲಿಸುವುದಾಗಿ ತಿಳಿಸಿದರು.

> ಚಿತ್ರದುರ್ಗ ಅಥವಾ ದಾವಣಗೆರೆಯಲ್ಲಿ ತೆಂಗು ನಾರಿನ ಉತ್ಪನ್ನಗಳ ಪ್ರದರ್ಶನ ಕೇಂದ್ರ ಹಾಗೂ ತರಬೇತಿ ಕೇಂದ್ರವನ್ನು ತೆರೆಯಲು ಕಾಯರ್ ಮಂಡಳಿ ಹೆಚ್ಚು ಉತ್ಸುಕವಾಗಿದೆ. ಈ ಕುರಿತು ಮಂಡಳಿ ಸಕಾರಾತ್ಮಕ ನಿರ್ಧಾರ ತೆಗೆದುಕೊಳ್ಳಲಿದೆ.
>
> \- ಸುಧೀರ್ ಗಾರ್ಗ್
> ಕಾಯರ್ ಮಂಡಳಿ ಚೇರ್ಮನ್

ಮಂಡಳಿ ಏರ್ಪಡಿಸಿದ್ದ ವೆಬಿನಾರ್‌ನಲ್ಲಿ ಚೇರ್ಮನ್ ಸುಧೀರ್ ಗಾರ್ಗ್, ಕಾರ್ಯದರ್ಶಿ ಕುಮಾರ ರಾಜ, ಲೋಕಸಭಾ ಸದಸ್ಯರೂ ಆದ ಮಂಡಳಿ ಸದಸ್ಯ ಡಾ. ವಿನಯ್ ಸಹಸ್ರಬುದ್ದೆ, ಆಡೂರ್ ಪ್ರಕಾಶ್, ಸದಸ್ಯರುಗಳಾದ ಜಿ.ಎಸ್.ಪ್ರಕಾಶ್, ಜಿ. ಚಂದ್ರಮೌಳಿ, ಕುಮಾರ್ ಗೋವಿಂದ್ ಗುಪ್ತಾ, ಎಸ್.ಕೆ. ಗೌತಮ್ ಇತರರು ಭಾಗವಹಿಸಿದ್ದರು.


## ಭಾವಪೂರ್ಣ ಅಶ್ರುತರ್ಪಣ



ದಿನಾಂಕ 23.12.2020ರ ಬುಧವಾರ ನಿಧನರಾದ ನಮ್ಮ ಬ್ಯಾಂಕ್‌ನ ಉಪಾಧ್ಯಕ್ಷರೂ, ಹೆಸರಾಂತ ವರ್ತಕರೂ ಆದ ಶ್ರೀ ಅಂದನೂರು ಮುಪ್ಪಣ್ಣ ಅವರ ಧರ್ಮಪತ್ನಿ

**ಶ್ರೀಮತಿ ಅಂದನೂರು ಸಂಧ್ಯಾ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀ ಕೋಗುಂಡಿ ಬಕ್ಕೇಶಪ್ಪ ಅಧ್ಯಕ್ಷರು

ನಿರ್ದೇಶಕರುಗಳು :

ಶ್ರೀ ಬಿ.ಸಿ. ಉಮಾಪತಿ
ಶ್ರೀ ಪಲ್ಲಾಗಟ್ಟಿ ಶಿವಾನಂದಪ್ಪ
ಶ್ರೀ ಎಂ. ಚಂದ್ರಶೇಖರ್
ಶ್ರೀ ಟಿ.ಎಸ್. ಜಯರುದ್ರೇಶ್
ಶ್ರೀಮತಿ ಸುರೇಖಾ ಎಂ. ಚಿಗಟೇರಿ
ಶ್ರೀ ನಲ್ಲೂರು ಎಸ್. ರಾಘವೇಂದ್ರ
ಶ್ರೀ ಮತ್ತಿಹಳ್ಳಿ ವೀರಣ್ಣ
ಶ್ರೀ ದೇವರಮನೆ ಶಿವಕುಮಾರ್
ಶ್ರೀ ಅಜ್ಜಂಪುರ ಶೆಟ್ರು ವಿಜಯಕುಮಾರ್
ಶ್ರೀ ಕಂಚಿಕೇರಿ ಮಹೇಶ್
ಶ್ರೀ ಇ.ಎಂ. ಮಂಜುನಾಥ
ಶ್ರೀ ವಿ. ವಿಕ್ರಮ್

ವೃತ್ತಿಪರ ನಿರ್ದೇಶಕರು :

ಶ್ರೀ ಮುಂಡಾಸ್ ವೀರೇಂದ್ರ, ಚಾರ್ಟರ್ಡ್ ಅಕೌಂಟೆಂಟ್
ಶ್ರೀ ಮಲ್ಲಿಕಾರ್ಜುನ ಕಣವಿ, ವಕೀಲರು

ವಿಶೇಷ ಆಹ್ವಾನಿತರು :

ಶ್ರೀ ಬೆಳ್ಳೂಡಿ ಮಂಜುನಾಥ್
ಶ್ರೀ ಎಂ. ದೊಡ್ಡಪ್ಪ

ಶ್ರೀ ಡಿ.ವಿ. ಆರಾಧ್ಯಮಠ್, ಪ್ರಧಾನ ವ್ಯವಸ್ಥಾಪಕರು
ಶ್ರೀ ಬಿ.ಎಸ್. ಮಲ್ಲೇಶ್, ಉಪ ಪ್ರಧಾನ ವ್ಯವಸ್ಥಾಪಕರು

ಬ್ಯಾಂಕಿನ ಸಿಬ್ಬಂದಿ ವರ್ಗದವರು ಮತ್ತು ಲಕ್ಷ್ಮಿ ಠೇವಣಿ ಸಂಗ್ರಹಕಾರರು

**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**

ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ.


# ಯುವಜನೋತ್ಸವ ಸ್ಪರ್ಧೆ ಮುಂದಕ್ಕೆ

ಕ್ರೀಡಾ ವಸತಿ ನಿಲಯದಲ್ಲಿ ಇಂದು ನಡೆಯಬೇಕಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ ಆಯ್ಕೆ ಸ್ಪರ್ಧೆ ಮುಂದೂಡಲಾಗಿದೆ. ವಿವರಗಳಿಗೆ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ದೂರವಾಣಿ 08192-237480) ಯನ್ನು ಸಂಪರ್ಕಿಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಶ್ರೀನಿವಾಸ್ ತಿಳಿಸಿದ್ದಾರೆ.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.12.2020ರ ಬುಧವಾರ ನಿಧನರಾದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ ಉಪಾಧ್ಯಕ್ಷರಾದ ಶ್ರೀ ಅಂದನೂರು ಮುಪ್ಪಣ್ಣ ಅವರ ಧರ್ಮಪತ್ನಿ **ಶ್ರೀಮತಿ ಅಂದನೂರು ಸಂಧ್ಯಾ** ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.


**ಅಂದನೂರು ಬಳಗ, ದಾವಣಗೆರೆ.**


# ಸಾರಿಗೆ ಬಸ್ ಗಳ ಬ್ಯಾಟರಿಗಳ ಕಳವು

ದಾವಣಗೆರೆ, ಡಿ.23- ಕೆಎಸ್ಸಾರ್ಟಿಸಿ ದಾವಣಗೆರೆ ವಿಭಾಗದ ವಿದ್ಯುತ್ ಶಾಖೆಯಲ್ಲಿ ದುರಸ್ತಿಗಾಗಿ ನಿಂತಿದ್ದ ಎರಡು ಬಸ್ ಗಳ ಒಟ್ಟು 35 ಸಾವಿರದ 954 ರೂ. ಮೌಲ್ಯದ 4 ಬ್ಯಾಟರಿಗಳು ಕಳುವಾಗಿರುವ ಬಗ್ಗೆ ಇಲ್ಲಿನ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇದೇ 15ರಂದು ಚಿತ್ರದುರ್ಗ ವಿಭಾಗದ ಹೊಸದುರ್ಗ ಘಟಕದಿಂದ ನವೀಕರಣಕ್ಕಾಗಿ ಹಾಗೂ 18ರಂದು ಚಳ್ಳಕೆರೆ ಘಟಕದಿಂದ ಅಪಘಾತ ದುರಸ್ತಿಗಾಗಿ ದಾವಣಗೆರೆ ವಿಭಾಗಕ್ಕೆ ಬಸ್ ಗಳು ಬಂದಿದ್ದವು. ಆ ಬಸ್ ಗಳಿಗೆ ಅಳವಡಿಸಿದ್ದ ಬ್ಯಾಟರಿಗಳು ಕಳ್ಳತನವಾಗಿವೆ ಎಂದು ದಾವಣಗೆರೆ ವಿಭಾಗದ ವಿಭಾಗೀಯ ಕಾರ್ಯಾಧೀಕ್ಷಕ ಎ.ಎನ್. ರವಿ ದೂರಿನಲ್ಲಿ ತಿಳಿಸಿದ್ದಾರೆ.


## ಪುಣ್ಯಸ್ಮರಣೆ



ದಿ. ಶ್ರೀ ಕೆ. ಹಾಲಯ್ಯ
ನಿವೃತ್ತ ಶಿಕ್ಷಕರು, ಕಂದನ ಕೋವಿ

ನೀವು ನಮ್ಮನ್ನಗಲಿ ಇಂದಿಗೆ (24.12.2009) ಹನ್ನೊಂದು ವರ್ಷಗಳಾದವು.

ಸದಾ ನಿಮ್ಮ ಸವಿ ನೆನಪಿನಲ್ಲಿರುವ........

ಶ್ರೀ ಮತಿ ಹಾಲಮ್ಮ ಮತ್ತು ಮಕ್ಕಳು,
ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಹಾಗೂ ಬಂಧು-ಮಿತ್ರರು.



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.12.2020ರ ಬುಧವಾರ ನಿಧನರಾದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ ಉಪಾಧ್ಯಕ್ಷರೂ, ನಮ್ಮ ಬಂಧುಗಳೂ ಆದ ಶ್ರೀ ಅಂದನೂರು ಮುಪ್ಪಣ್ಣ ಅವರ ಧರ್ಮಪತ್ನಿ

**ಶ್ರೀಮತಿ ಅಂದನೂರು ಸಂಧ್ಯಾ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಯಜಮಾನ್ ಮೋತಿ ವೀರಣ್ಣ, ಮಾಜಿ ಶಾಸಕರು
✦ ಯಜಮಾನ್ ಮೋತಿ ರಾಜೇಂದ್ರ
ಮತ್ತು ಕುಟುಂಬ ವರ್ಗದವರು



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.12.2020ರ ಬುಧವಾರ ನಿಧನರಾದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ ಉಪಾಧ್ಯಕ್ಷರಾದ ಶ್ರೀ ಅಂದನೂರು ಮುಪ್ಪಣ್ಣ ಅವರ ಧರ್ಮಪತ್ನಿ

**ಶ್ರೀಮತಿ ಅಂದನೂರು ಸಂಧ್ಯಾ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಗಣೇಶ್ ಬಿ.ಕೆ. ಹಳೇಬಿಸಲೇರಿ, ಮಾಲೀಕರು
**ಶ್ರೀ ಅನ್ನಪೂರ್ಣೇಶ್ವರಿ ಹೋಟೆಲ್**
ಡೋರ್ ನಂ. 2994/3ಎ, 7ನೇ ಮೇನ್, 4ನೇ ಕ್ರಾಸ್,
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ-04


# ಬೈಕ್ ಅಪಘಾತ: ಸವಾರರ ಸಾವು

ದಾವಣಗೆರೆ, ಡಿ.23- ಎರಡು ಮೋಟಾರ್ ಬೈಕ್ ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಸವಾರರಿಬ್ಬರೂ ಮೃತಪಟ್ಟಿರುವ ಘಟನೆ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಜೆ ನಡೆದಿದೆ.

ಹಿರೇಮಳಲಿ ಗ್ರಾಮದ ತಿಪ್ಪೇಶಪ್ಪ (42), ಚಿಕ್ಕಮಗಳೂರು ಜಿಲ್ಲೆ ತರಿಕೆರೆ ಗ್ರಾಮದ ಅರುಣ್ (28) ಮೃತ ಸವಾರರು. ಗ್ರಾಮದ ಹೊಸೂರಪ್ಪ ಅವರ ಮಗ ತಿಪ್ಪೇಶಪ್ಪ ಬೈಕ್ ನಲ್ಲಿ ಹಿರೇಮಳಲಿ ಗ್ರಾಮದಿಂದ ನಲ್ಲೂರು ಗ್ರಾಮದ ಕಡೆಗೆ ಚಾಲನೆ ಮಾಡಿಕೊಂಡು ಹೋಗುತ್ತಿದ್ದ. ಅದೇ ವೇಳೆಗೆ ಮೇಳನಾಯ್ಕನ ಕಟ್ಟೆ ಗ್ರಾಮದ ಕಡೆಯಿಂದ ಹಿರೇಮಳಲಿ ಗ್ರಾಮದ ಕಡೆಗೆ ಬೇರೆ ಬೈಕ್ ನಲ್ಲಿ ಬರುತ್ತಿದ್ದ ಅರುಣ್ ಚಾಲನೆ ಮಾಡಿಕೊಂಡು ಬರುವಾಗ ನಲ್ಲೂರು - ಹಿರೇಮಳಲಿ ರಸ್ತೆಯಲ್ಲಿ ಎರಡೂ ಬೈಕ್ ಗಳು ಡಿಕ್ಕಿಯಾಗಿ ಜಖಂಗೊಂಡಿವೆ.

# ಬ್ರಾಹ್ಮಣ ಸಂಘದಿಂದ ವಿದ್ಯಾರ್ಥಿ ವೇತನ

ದಾವಣಗೆರೆ, ಡಿ.23- ತ್ರಿಮತಸ್ಥ ಬ್ರಾಹ್ಮಣ ಸಮಾಜದ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನ ನೀಡಲಾಗುವುದು ಎಂದು ಬ್ರಾಹ್ಮಣ ಸಮಾಜ ಸೇವಾ ಸಂಘ ತಿಳಿಸಿದೆ. ಅರ್ಜಿದಾರರು ಪಿಯುಸಿ ಹಾಗೂ ಡಿಗ್ರಿ ಮಟ್ಟದ ವ್ಯಾಸಂಗ ಮಾಡುತ್ತಿರಬೇಕು.

ಜನವರಿ 5 ರೊಳಗೆ ಅರ್ಜಿ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸಿ : ಮೊ: 9620900275, 9448013144.

## ಅನ್ನದಾತ

ಪುಣ್ಯ ದೇಶವಿದು ಭಾರತ
ನೇಗಿಲ ಹಿಡಿದಿರುವನು ರೈತ
ಕೃಷಿಕನೆ ದೇಶದ ಬೆನ್ನೆಲುಬು
ಕೃಷಿಯೇ ಇವನ ಕುಲಕಸುಬು.

ಬೆವರನು ಸುರಿಸಿ ಹೊಲದಲಿ
ದುಡಿದು
ಮಣ್ಣಿನ ಮಗನೆಂದೆನಿಸುವನು
ಕಳೆಯನು ತೆಗೆದು ಬೆಳೆಯನು
ಬೆಳೆದು
ದೇಶಕೆ ಅನ್ನವ ನೀಡುವನು.

ಕೈ ಕೆಸರಾಗದೆ ಬಾಯ್ಮೊಸರಾಗದು
ಎನ್ನುವ ಸತ್ಯವ ಅರಿತಿಹನು
ಕಾಯಕದಲಿ ಕೈಲಾಸವ ಕಾಣುತ
ಮಣ್ಣಲಿ ಚಿನ್ನವ ಬೆಳೆಯುವನು.

ಬಿಸಿಲೇ ಇರಲಿ ಮಳೆಯೇ ಬರಲಿ
ಬೇಸರಿಸದೆ ದುಡಿವನು ಸತತ
ದೇಶದ ಜನರ ಏಳ್ಗೆಯ ಬಯಸುವ
ಇವನೇ ನಮ್ಮಯ ಅನ್ನದಾತ.

ರೈತನು ಮಾಡುವ ಶ್ರಮದಾನ
ಆಯಿತು ದೇಶಕೆ ವರದಾನ
ಪ್ರತಿಫಲ ಬಯಸದೆ ದುಡಿವ
ಅವನಿಗೆ
ಇದುವೇ ನಮ್ಮೆಲ್ಲರ ನಮನ.

ದೇಶದ ಸಮಸ್ತ ರೈತರಿಗೆ ರೈತರ
ದಿನಾಚರಣೆಯ ಹಾರ್ದಿಕ
ಶುಭಾಶಯಗಳು.

- ಜಿ.ಎಸ್. ಗಾಯತ್ರಿ, ಶಿಕ್ಷಕಿ.
ಬಾಪೂಜಿ ಶಾಲೆ, ಹರಿಹರ.

## 'ಕಾಯ(ಕ)'

ಹುಟ್ಟಿಸಿದ ಸೃಷ್ಟಿ ದೇವ
ಕಾಯಕದಲ್ಲಿ ಕಾಯ್ವ ಜೀವ
ಉದರ ನಿಮಿತ್ತಂ ಬಹುಕೃತ ವೇಷಂ
ಭಾವಜೀವದೊಳು ಸರ್ವ ನಿಮಿತ್ತಂ.

ಬ್ರಹ್ಮದೇವ ಬರೆದ ಹಣೆಬರಹ
ಕರ್ಮ ಫಲದಲ್ಲಿ ತರ ತರಹ !
ಬೆನ್ನ ಹಿಂದಿನ ನೆರಳಿನಂತೆ....
ನೆರಳಿನ ಮಾಯದಲಿ ಅವನಂತೆ !

ದೊಂಬರಾಟದ ಬದುಕಿನಲಿ
ಉದರದ ಹಸಿವಿಗೆ ಹೋರಾಟ
ಪೂರ್ವ ಪುಣ್ಯದ ಗಂಟಿನಲಿ....
ಕಾಯಕವದು ವ್ಯಂಗ್ಯ ನಗೆಯಲ್ಲಿ !

ತಂತಿಯ ಮೇಲಿನ ಬದುಕಿಹುದು
ಬೆಳಕಿನ ಶಕ್ತಿಯ ಪ್ರಸರಣವು....
ಆಪತ್ತು- ವಿಪತ್ತು ಕಾಯಕದಲ್ಲಿ
ಜಾಗರೂಕತೆಯದು ಬಲೆಯಲ್ಲಿ !!

- ವೀಣಾ ಕೃಷ್ಣಮೂರ್ತಿ, ದಾವಣಗೆರೆ.

# ಶ್ರೀರಾಮ ಮಂದಿರ ನಿರ್ಮಾಣ : ನಿಧಿ ಸಮರ್ಪಣಾ ಅಭಿಯಾನದ ಸಭೆ





ದಾವಣಗೆರೆ, ಡಿ.23- ಶ್ರೀರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನ ಸಂಘ ಪರಿವಾದ ಸಮೇತರಾಗಿ ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿನ ಶ್ರೀ ಗಣಪತಿ ದೇವಸ್ಥಾನದಲ್ಲಿ ನಗರದ ಪ್ರಮುಖರು ಸೇರಿ ನಗರದಲ್ಲಿ ಪ್ರತಿ ವಸತಿ ಸಹ ಜವಾಬ್ದಾರಿಗಳನ್ನು ಘೋಷಣೆ ಮಾಡಿ, ನಂತರ ದೀಪ ಬೆಳಗಿಸುವ ಮೂಲಕ ಶುಭ ಆರಂಭ ಮಾಡಲಾಯಿತು.

ಜಿಲ್ಲಾ ಮಹಿಳಾ ಪ್ರಮುಖರಾದ ಸುಧಾ ಜಯರುದ್ರೇಶ್, ಶೋಭಾ ಕೊಟ್ರೇಶ್, ಮಂಜುಳಾ ಮಹೇಶ್, ಸವಿತಾ ರವಿಕುಮಾರ್, ಜಯಮ್ಮ, ನಾಗರತ್ನ ನಾಯಕ್, ಅಕ್ಷತಾ, ಉಷಾ ಶೆಟ್ಟಿ ಮುಂತಾದವರನ್ನೊಳಗೊಂಡ ತಂಡವನ್ನು ರಚನೆ ಮಾಡಲಾಯಿತು.

ನಂದಿ ಪೆಟ್ರೋಲ್ ಬಂಕ್‌ನ ಟಿ.ಎಸ್. ಜಯರುದ್ರೇಶ್, ಜೊಳ್ಳಿ ಗುರು, ಯೋಗಿಶ್ ಹೊಸಕೆರೆ, ರವೀಂದ್ರ ಆಚಾರ್ಯ ಮತ್ತು ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಉಕ್ಕಡಗಾತ್ರಿಯಲ್ಲಿ ಬೆಳ್ಳಿ ರಥೋತ್ಸವ



ಮಲೇಬೆನ್ನೂರು, ಡಿ.23- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಕಾರ್ತಿಕ ಮಾಸದ ಅಂಗವಾಗಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಬೆಳ್ಳಿ ರಥೋತ್ಸವವನ್ನು ಕೊರೊನಾ ಕಾರಣದಿಂದಾಗಿ ಸರಳವಾಗಿ ಸೋಮವಾರ ಆಚರಿಸಲಾಯಿತು.

ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ರಥಕ್ಕೆ ಪೂಜೆ ಸಲ್ಲಿಸಿ, ಸಂಪ್ರದಾಯದಂತೆ ರಥೋತ್ಸವಕ್ಕೆ ಚಾಲನೆ ನೀಡಿದರು. ದೇವಸ್ಥಾನ ಆವರಣದಲ್ಲಿ ಜರುಗಿದ ರಥೋತ್ಸವಕ್ಕೆ ವಿವಿಧ ಕಲಾಮೇಳಗಳು ಮೆರಗು ನೀಡಿದವು.

ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಸೇರಿದಂತೆ ಟ್ರಸ್ಟ್ ಕಮಿಟಿ ಸದಸ್ಯರು, ಗ್ರಾಮಸ್ಥರು ಹಾಗೂ ಭಕ್ತಾದಿಗಳು ಪಾಲ್ಗೊಂಡಿದ್ದರು.

# ಖಾಸಗಿ ಶಾಲಾ ಶಿಕ್ಷಕರ ನೆರವಿಗೆ ಆಗ್ರಹ

## ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಹಕ್ಕೊತ್ತಾಯ



ದಾವಣಗೆರೆ, ಡಿ.23- ಖಾಸಗಿ ಶಾಲಾ ಶಿಕ್ಷಕರಿಗೆ 10 ಸಾವಿರ ರೂ. ಸಹಾಯ ಧನ, ಶಾಲಾ ಸಿಬ್ಬಂದಿ ಹಾಗೂ ಕುಟುಂಬಕ್ಕೆ ಉಚಿತವಾಗಿ ಕೊರೊನಾ ಲಸಿಕೆ, ಚಿಕಿತ್ಸೆ, ಆರ್‌ಟಿಐ ಹಣ ಶೀಘ್ರ ಬಿಡುಗಡೆ ಸೇರಿದಂತೆ, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ದಾವಣಗೆರೆ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ ಹಕ್ಕೊತ್ತಾಯ ಮಂಡಿಸಿದೆ.

ನಗರದ ಶಾಮನೂರು ರಸ್ತೆಯಲ್ಲಿರುವ ಯೂರೋ ಕಿಡ್ಸ್ ಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಶಿಕ್ಷಕರ ಬೇಡಿಕೆಗಳನ್ನು ಈಡೇರಿಸುವಂತೆ ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಸಚಿವರನ್ನು ಒತ್ತಾಯಿಸಲು ನಿರ್ಣಯಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಾನ್ಯತೆ ಪಡೆದ ಅನುದಾನ ರಹಿತ ಖಾಸಗಿ ಶಾಲೆಗಳ ಸಂಘ (RUPSA) ದ ರಾಜ್ಯ ಕಾರ್ಯಾಧ್ಯಕ್ಷ ಹಾಲನೂರು ಎಸ್.ಲೇಪಾಕ್ಷ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿದರು.

ಸುಪ್ರೀಂ ಕೋರ್ಟ್ ಆದೇಶದನ್ವಯ ಸರ್ಕಾರವು ಇತ್ತೀಚೆಗೆ ಖಾಸಗಿ ಶಾಲೆಗಳಲ್ಲಿ ಮೂಲ ಸೌಕರ್ಯಗಳು ಹಾಗೂ ಇತರೆ ಸೌಲಭ್ಯಗಳ ಬಗ್ಗೆ ಬಿಗಿ ನಿಯಮಗಳ ಸುತ್ತೋಲೆ ಹೊರಡಿಸಿದೆ. ಆದರೆ ಆ ನಿಯಮಗಳ ಸರ್ಕಾರಿ ಶಾಲೆಗಳಿಗೆ ಏಕೆ ಅನ್ವಯಿಸುವುದಿಲ್ಲ? ಎಂದು ಪ್ರಶ್ನಿಸಿದ ಅವರು, ಈ ನಿಯಮಗಳು ಸರ್ಕಾರಿ ಶಾಲೆಗಳಿಗೂ ಅನ್ವಯಿಸಿದ್ದೇ ಆದರೆ ಶೇ.90ರಷ್ಟು ಶಾಲೆಗಳು ಮುಚ್ಚಲ್ಪಡುತ್ತವೆ.

ಸರ್ಕಾರ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ನೀಡಲು ಸಾಧ್ಯವಾಗದೆಂಬ ಕಾರಣಕ್ಕೆ ಖಾಸಗಿ ಶಾಲೆಗಳಿಗೆ ಅನುಮತಿ ನೀಡಿದೆ. ಸರ್ಕಾರ ಮಾಡಬೇಕಾದ ಕಾರ್ಯವನ್ನು ಖಾಸಗಿ ಶಾಲೆಗಳು ಮಾಡುತ್ತಿವೆ. ಆದಾಗ್ಯೂ ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಗಧಾಪ್ರಹಾರ ಮಾಡುತ್ತಲೇ ಬಂದಿದೆ ಎಂದರು.

ಕಾರ್ಪೊರೇಟ್ ಶಾಲೆಗಳು ಲಕ್ಷಕ್ಕೂ ಅಧಿಕ ಡೊನೇಷನ್ ಪಡೆದು ಲೂಟಿ ಮಾಡುತ್ತಿವೆ. ಆದರೆ ಬಜೆಟ್ ಶಾಲೆಗಳು ಕೇವಲ 30 ರಿಂದ 60 ಸಾವಿರ ರೂ.ಗಳ ವರೆಗೆ ಹಣ ಪಡೆಯುತ್ತವೆ. ಈ ಹಣದಲ್ಲಿಯೇ ಶಿಕ್ಷಕರು, ನೌಕರರ ಭತ್ಯೆ, ಮೂಲ ಸೌಕರ್ಯ ಕಲ್ಪಿಸಬೇಕಿರುತ್ತದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಉಳಿವಿಗಾಗಿ ಹೋರಾಟ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಸಂಘಟನೆ ಬಲಗೊಳ್ಳಬೇಕಿದೆ ಎಂದರು.

ಇದೇ ವೇಳೆ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟವು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಯಾವುದೇ ಕೆಲಸಗಳಿಗೆ ಇಲಾಖೆ ಅಧಿಕಾರಿಗಳಿಗೆ ಲಂಚ ನೀಡದೆ, ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕೆಂದು ಸಲಹೆ ನೀಡಿದರು.

ಒಕ್ಕೂಟದ ಸಂಚಾಲಕ ಎಂ.ಎನ್. ಲೋಕೇಶ್, ಶಿಕ್ಷಕರು ತಮ್ಮ ಹಕ್ಕುಗಳಿಗಾಗಿ ಪ್ರತಿಭಟನೆಗೆ ಮುಂದಾಗಿರುವುದು ದುರಂತ. ಪ್ರಜಾಪ್ರಭುತ್ವ ವ್ಯವಸ್ಥೆ ಯಾವ ಮಟ್ಟಕ್ಕೆ ಕುಸಿದಿದೆ ಎಂಬುದಕ್ಕೆ ಇದು ನಿದರ್ಶನ ಎಂದರು.

ಒಕ್ಕೂಟದ ಅಧ್ಯಕ್ಷ ಟಿ.ಎಂ.ಉಮಾಪತಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶ್ರೀರಾಮ ಮೂರ್ತಿ ಸಿ., ಕೆ.ಸಿ. ಲಿಂಗರಾಜು, ಆರ್.ಎಲ್. ಪ್ರಭಾಕರ್, ಎಂ.ಎಸ್. ಸಂತೋಷ್ ಕುಮಾರ್, ಕೆ. ಎಸ್. ಮಂಜುನಾಥ ಅಗಡಿ, ಪ್ರಸನ್ನ ಕುಮಾರ್ ಎ. ಎನ್., ಮೈನುದ್ದೀನ್ ಹೆಚ್.ಜೆ., ಕೆ.ಸಿ. ಮಂಜು, ಸಹನಾ ರವಿ, ಹೆಚ್.ಜಯಣ್ಣ, ವಿಜಯಕುಮಾರ್, ಪೃಥ್ವಿರಾಜ್ ಬಾದಾಮಿ, ನಾಗರಾಜ ಶೆಟ್ಟಿ, ಶಶಿಧರ್, ಅನಸೂಯ, ಸುರೇಶ್ ಕೆ., ರವಿ ಟಿ.ಆರ್., ಅರವಿಂದ ಪಿ.ಎಸ್. ಸೈಯದ್ ಮನಪುಶ್, ಪ್ರಭುಕುಮಾರ್ ಕೆ.ಎಸ್. ಇತರರು ಪಾಲ್ಗೊಂಡಿದ್ದರು.

ಇದೇ ವೇಳೆ ಒಕ್ಕೂಟದ ಸಹ ಕಾರ್ಯದರ್ಶಿ ಕೆ.ಎಸ್. ಮಂಜುನಾಥ ಅಗಡಿ ಅವರನ್ನು ರೂಪ್ಸಾದ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದಾಗಿ ಹಾಲನೂರು ಎಸ್.ಲೇಪಾಕ್ಷ ತಿಳಿಸಿದರು.

### ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಹಕ್ಕೊತ್ತಾಯಗಳು

ಇತರೆ ಕೆಲಸಗಾರರಿಗೆ ನೀಡಿದಂತೆ ಶಿಕ್ಷಕರಿಗೂ 10 ಸಾವಿರ ರೂ. ಸಹಾಯ ಧನ ನೀಡಬೇಕು. ಖಾಸಗಿ ಶಾಲೆಗಳಿಂದ ಶಿಕ್ಷಕರ ಕಲ್ಯಾಣ ನಿಧಿ ಹೆಸರಿನಲ್ಲಿ ತಿಂಗಳಿಗೆ 10 ಸಾವಿರ ರೂ. ಸಹಾಯ ಧನ ನೀಡಬೇಕು. ಶಾಲೆ ಆರಂಭವಾದ ನಂತರ ಪೋಷಕರಿಂದ ಸಂಗ್ರಹಿಸಬಹುದಾದ ಶುಲ್ಕದ ಬಗ್ಗೆ ನಿರ್ದಿಷ್ಟ ನಿರ್ಣಯ ಪ್ರಕಟಿಸಬೇಕು.

ಶಾಲಾ ಶಿಕ್ಷಕರು, ಸಿಬ್ಬಂದಿ ಹಾಗೂ ಕುಟುಂಬಕ್ಕೆ ಕೊರೊನಾ ಲಸಿಕೆ ಉಚಿತವಾಗಿ ನೀಡಬೇಕು. ಈ ಸಾಲಿನ ಆರ್‌ಟಿಇ ಕಂತಿನ ಹಣ ಶೀಘ್ರ ಪಾವತಿಸಬೇಕು. ಖಾಸಗಿ ಶಾಲೆಗಳ ಮನ್ನಣೆ ನವೀಕರಣ 5 ವರ್ಷಕ್ಕೆ ವಿಸ್ತರಿಸಬೇಕು. ಶಾಲಾ ಕಟ್ಟಡ ತೆರಿಗೆ, ಇನ್ನಿತರೆ ವೆಚ್ಚಕ್ಕೆ ವಿನಾಯಿತಿ ನೀಡಬೇಕು.

ವಾಹನಗಳ ವಿಮಾ ತೆರಿಗೆ, ಇನ್ನಿತರೆ ಖರ್ಚುಗಳಿಗೆ ಪೂರ್ಣ ವಿನಾಯಿತಿ ನೀಡಬೇಕು. 30 ಲಕ್ಷ ರೂ. ಕೋವಿಡ್ ವಾರಿಯರ್ಸ್ ಪ್ಯಾಕೇಜ್ ಶಿಕ್ಷಕರಿಗೂ ನೀಡಬೇಕು. ಆರ್‌ಟಿಇ ಹಣ ಮಂಜೂರಾತಿಗೆ ಶಾಲೆಗಳ ಆಡಿಟ್ ವರದಿ ಪರಿಗಣಿಸುವುದನ್ನು ರದ್ದುಪಡಿಸಬೇಕು ಇತ್ಯಾದಿ.

# ಮಧ್ಯಸ್ಥಿಕೆಯಲ್ಲಿ ಭಾರತಕ್ಕೆ ಸೋಲು

**(1ನೇ ಪುಟದಿಂದ)** ಈ ಆದೇಶವನ್ನು ಪರಿಶೀಲಿಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಆದೇಶದ ಪಾಲನೆಯಾಗದೇ ಇದ್ದರೆ ಕೇರ್ನ್ ಬ್ರಿಟನ್ ಸರ್ಕಾರದಲ್ಲಿ ಮನವಿ ಸಲ್ಲಿಸಿ, ವಿದೇಶದಲ್ಲಿ ಭಾರತ ಹೊಂದಿರುವ ಆಸ್ತಿಗಳನ್ನು ವಶಪಡಿಸಿಕೊಳ್ಳುವಂತೆ ಕೋರಬಹುದಾಗಿದೆ ಎಂದು ಈ ಬೆಳವಣಿಗೆಯ ಬಗ್ಗೆ ತಿಳಿದಿರುವವರು ಹೇಳಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇರ್ನ್ ಎನರ್ಜಿ, ತನಗೆ 1.2 ಶತಕೋಟಿ ಡಾಲರ್ ಹಾಗೂ ಬಡ್ಡಿ ಮತ್ತು ವೆಚ್ಚ ನೀಡುವಂತೆ ಆದೇಶಿಸಲಾಗಿದೆ ಎಂದು ತಿಳಿಸಿದೆ.

200 ದಶಲಕ್ಷ ಡಾಲರ್ ಬಡ್ಡಿ ಹಾಗೂ 20 ದಶಲಕ್ಷ ಡಾಲರ್ ವೆಚ್ಚವಾಗುತ್ತದೆ. ಒಟ್ಟಾರೆ ಇದರ ಮೌಲ್ಯ 1.4 ಶತಕೋಟಿ ಡಾಲರ್ (10,500 ಕೋಟಿ ರೂ.) ಎಂದು ಮೂಲಗಳು ಹೇಳಿವೆ.

ಕಳೆದ ಮೂರು ತಿಂಗಳಲ್ಲಿ ಪೂರ್ವಾನ್ವಯ ತೆರಿಗೆಯಲ್ಲಿ ಭಾರತ ಸರ್ಕಾರಕ್ಕೆ ಆಗಿರುವ ಎರಡನೇ ಸೋಲು ಇದಾಗಿದೆ. ಸೆಪ್ಟೆಂಬರ್ ತಿಂಗಳಲ್ಲಿ ಬ್ರಿಟನ್‌ನ ವೊಡಫೋನ್ ಸಮೂಹ 22,100 ಕೋಟಿ ರೂ.ಗಳ ತೆರಿಗೆಯ ಅಂತರರಾಷ್ಟ್ರೀಯ ಸಂಧಾನದಲ್ಲಿ ಗೆಲುವು ಸಾಧಿಸಿತ್ತು.

ಆದರೆ, ಕೇರ್ನ್ ವಿರುದ್ಧ ಮಾತ್ರ ಸರ್ಕಾರ ಪೂರ್ವಾನ್ವಯ ತೆರಿಗೆಯನ್ನು ವಸೂಲಿ ಮಾಡಿತ್ತು. ಸಂಧಾನದ ಸಮಯದಲ್ಲಿ ಸರ್ಕಾರ ವೇದಾಂತ ಕಂಪನಿಯಲ್ಲಿ ಕೇರ್ನ್ ಹೊಂದಿದ್ದ ಶೇ.5ರಷ್ಟು ಷೇರುಗಳನ್ನು, 1,140 ಕೋಟಿ ರೂ.ಗಳ ಡಿವಿಡೆಂಡ್ ಮತ್ತು 1,590 ಕೋಟಿ ರೂ.ಗಳ ತೆರಿಗೆ ರೀಫಂಡ್ ಅನ್ನು ವಶಪಡಿಸಿಕೊಂಡಿತ್ತು.

ಕೇರ್ನ್ ಎನರ್ಜಿ ಅಷ್ಟೇ ಅಲ್ಲದೇ ಅದರ ಅಂಗ ಸಂಸ್ಥೆಯಾದ ಕೇರ್ನ್ ಇಂಡಿಯಾ ವಿರುದ್ಧವೂ ಸರ್ಕಾರ ಇದೇ ರೀತಿಯ ತೆರಿಗೆ ಕೇಳಿತ್ತು. ಕೇರ್ನ್ ಇಂಡಿಯಾ ಈಗ ವೇದಾಂತ ಲಿಮಿಟೆಡ್ ಭಾಗವಾಗಿದೆ. ಕೇರ್ನ್ ಇಂಡಿಯಾ ಪ್ರತ್ಯೇಕ ಮಧ್ಯಸ್ಥಿಕೆ ಮೂಲಕ ಸರ್ಕಾರದ ಬೇಡಿಕೆಯನ್ನು ಪ್ರಶ್ನಿಸಿದೆ.

ಕೇಂದ್ರ ಸರ್ಕಾರ ಇದುವರೆಗೂ ವೊಡಫೋನ್ ಪ್ರಕರಣದಲ್ಲಿ ಆದ ಮಧ್ಯಸ್ಥಿಕೆ ನಷ್ಟದ ವಿರುದ್ಧ ಮನವಿ ಸಲ್ಲಿಸಿಲ್ಲ. ಕೇರ್ನ್ ಮಧ್ಯಸ್ಥಿಕೆ ವಿಷಯದಲ್ಲೂ ತ್ವರಿತ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ವೊಡಫೋನ್ ವಿಷಯದಲ್ಲಿ ಸರ್ಕಾರ ಯಾವುದೇ ಹಣಕಾಸು ಪರಿಹಾರ ನೀಡಬೇಕಿಲ್ಲ. ಸಿಂಗಪುರ ನ್ಯಾಯಾಲಯ ನೀಡಿರುವ ತೀರ್ಪನ್ನು ಪ್ರಶ್ನಿಸಲು ಡಿಸೆಂಬರ್ 24ರವರೆಗೆ ಸಮಯವಿದೆ.

# ಶಾಲೆ ಆರಂಭದಲ್ಲಿ ಬದಲಾವಣೆ ಇಲ್ಲ

**(1ನೇ ಪುಟದಿಂದ)** ವಿಡಿಯೋ ಕಾನ್ಫರೆನ್ಸ್ ಮೂಲಕ ಸಮಾಲೋಚನೆ ಮಾಡಿದ ಸಚಿವರು ತರಗತಿಗಳನ್ನು ಆರಂಭ ಮಾಡುವುದಕ್ಕೂ ಮುನ್ನ ಕೈಗೊಳ್ಳಬೇಕಾದ ಮುಂಜಾಗ್ರತೆಯ ಬಗ್ಗೆ ಚರ್ಚೆ ಮಾಡಿದರು. ಅಲ್ಲದೇ 6 ರಿಂದ 9ನೇ ತರಗತಿಯವರೆಗೆ ವಿದ್ಯಾಗಮ ಪುನರಾರಂಭಿಸುವ ಸಂಬಂಧ ಚರ್ಚೆ ಮಾಡಿದರು. ಎಲ್ಲಾ ಶಿಕ್ಷಕರು ಆರ್.ಟಿ. - ಪಿ.ಸಿ.ಆರ್. ಟೆಸ್ಟ್‌ಗೆ ಒಳಪಡಲೇ ಬೇಕು. ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ಪೋಷಕರ ಒಪ್ಪಿಗೆ ಪತ್ರ ಕಡ್ಡಾಯ. ಮಕ್ಕಳನ್ನು ಶಾಲೆಗೆ ಕಳುಹಿಸುವುದು, ಬಿಡುವುದು ಪೋಷಕರ ನಿರ್ಧಾರಕ್ಕೆ ಬಿಟ್ಟಿದ್ದು. ಹಾಜರಾತಿ ಕಡ್ಡಾಯವಲ್ಲ ಎಂದರು.

# ರಾತ್ರಿಯಿಂದಲೇ ಕರ್ಫ್ಯೂ

**(1ನೇ ಪುಟದಿಂದ)** ಇರುವುದಿಲ್ಲ. ಜನರು ಎಂದಿನಂತೆ ತಮ್ಮ ನಿತ್ಯ ವ್ಯವಹಾರಗಳನ್ನು ನಡೆಸಲು ಸರ್ಕಾರ ಇದುವರೆಗೂ ಯಾವುದೇ ಅಡ್ಡಿಗಳನ್ನು ಪ್ರಕಟಿಸಿಲ್ಲ.

ಬುಧವಾರ ಬೆಳಿಗ್ಗೆ ಕೋವಿಡ್ ನಿಯಂತ್ರಣ ಕಾರ್ಯಪಡೆ ತಾಂತ್ರಿಕ ಸಲಹಾ ಸಮಿತಿ ಸದಸ್ಯರ ಜೊತೆ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ, ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೂ ಕರ್ಫ್ಯೂ ಜಾರಿಯಲ್ಲಿರುತ್ತದೆ. ಕರ್ಫ್ಯೂ ಸಂದರ್ಭದಲ್ಲಿ ಹಾಲು, ವೈದ್ಯಕೀಯ ಸೇವೆ ಸೇರಿದಂತೆ ತುರ್ತು ಮತ್ತು ಅಗತ್ಯ ಸೇವೆಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ ಎಂದಿದ್ದರು.

ಆದರೆ, ಆನಂತರ ಟ್ವೀಟ್ ಮಾಡಿರುವ ಅವರು, ಕರ್ನಾಟಕ ರಾಜ್ಯದಲ್ಲಿ ಬುಧವಾರದಿಂದ ಜಾರಿ ಮಾಡಲು ಉದ್ದೇಶಿಸಿದ್ದ ರಾತ್ರಿ ಕರ್ಫ್ಯೂ ಬದಲಾಗಿ ಗುರುವಾರದಿಂದ ಜಾರಿಗೆ ತರಲಾಗುವುದು. ರಾತ್ರಿ ಕರ್ಫ್ಯೂ ಸಂದರ್ಭದಲ್ಲಿ, ಡಿ.24ರಂದು ಕ್ರಿಸ್ ಮಸ್ ಹಬ್ಬದ ಪ್ರಯುಕ್ತ ನಡೆಯಲಿರುವ ವಿಶೇಷ ಧಾರ್ಮಿಕ ಕಾರ್ಯಕ್ರಮಗಳನ್ನು (ಮಿಡ್ ನೈಟ್ ಮಾಸ್) ಯಾವುದೇ ಅಡಚಣೆಯಿಲ್ಲದೆ ಮಾಡಬಹುದು ಎಂದು ಹೇಳಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, ಸಾರಿಗೆ ಬಸ್‌ಗಳ ಸಂಚಾರದಲ್ಲಿ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು. ರಾತ್ರಿ ಹೊರಡುವ ಬಸ್‌ಗಳಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ ಎಂದಿದ್ದಾರೆ.

# ಮೌಲ್ಯವರ್ಧನೆಯು ಜಾಣರ ಕೃಷಿ

**(1ನೇ ಪುಟದಿಂದ)** ಆದರೆ, ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆ ಭಾಗಿಯಾಗುವುದು ಕಡಿಮೆ. ಮಹಿಳೆಯರನ್ನೂ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯ ಭಾಗ ಮಾಡಿದಾಗ ಕೃಷಿ ಪರಿಣಾಮಕಾರಿಯಾಗಿ ಹೆಚ್ಚು ಲಾಭ ಸಿಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞ ಎಂ.ಜಿ. ಬಸವನಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಕೊರೊನಾ ಕಾರಣದಿಂದಾಗಿ ಬೇರೆಲ್ಲ ವಲಯಗಳಿಗೆ ಹೊಡೆತ ಬಿದ್ದರೂ ಕೃಷಿ ವಲಯ ಬೆಳವಣಿಗೆ ಕಂಡಿದೆ. ಈ ಹಿನ್ನೆಲೆಯಲ್ಲಿ ಕೃಷಿ ಮಹತ್ವ ಪಡೆದಿದೆ. ತುಂಡು ಭೂಮಿಯಲ್ಲಿ ಹಿಂಡು ಬೆಳೆಯುವ ತಂತ್ರಜ್ಞಾನ ಈ ಕ್ಷೇತ್ರದಲ್ಲಿ ಅಳವಡಿಕೆ ಮಾಡಿಕೊಳ್ಳಬೇಕಿದೆ ಎಂದರು.

ವೇದಿಕೆಯ ಮೇಲೆ ರಾಜ್ಯ ಕೃಷಿ ತಂತ್ರಜ್ಞರ ಸಂಸ್ಥೆ ನಿರ್ದೇಶಕ ಬಿ. ಉಮೇಶ್, ಕೃಷಿ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಎಸ್.ವಿ. ರಾಜಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಹನುಮಂತಪ್ಪ ಅಧ್ಯಕ್ಷತೆ ವಹಿಸಿದ್ದರು.

ಚಂದ್ರಶೇಖರಪ್ಪ ಸ್ವಾಗತಿಸಿದರೆ, ಜೆ. ರಘುರಾಜ ನಿರೂಪಿಸಿದರು. ಡಾ. ಜಿ.ಕೆ. ಜಯದೇವಪ್ಪ ವಂದಿಸಿದರು.

## ಮರಾಠ ಸಮುದಾಯಕ್ಕೆ ಆರ್ಥಿಕ ಮೀಸಲಾತಿ

**(1ನೇ ಪುಟದಿಂದ)** ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರ ಮೀಸಲಾತಿ ನಿಗದಿ ಪಡಿಸಲಾಗಿದೆ. ಮಹಾರಾಷ್ಟ್ರ ಸರ್ಕಾರ ಈ ಹಿಂದೆ ಮರಾಠ ಮುದಾಯಕ್ಕೆ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದಡಿ ಮೀಸಲಾತಿ ಕಲ್ಪಿಸಿತ್ತು. ಅದಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

## ರಿದ್ಧಿ ಸಿದ್ಧಿ ರಾಯಭಾರಿಯಾಗಿ ಶ್ರೀರಕ್ಷಾ



ದಾವಣಗೆರೆ, ಡಿ.23- ನಗರದ ರಿದ್ಧಿ ಸಿದ್ಧಿ ಫೌಂಡೇಷನ್ನಿನ ಈ ಸಾಲಿನ ರಾಯಭಾರಿಯಾಗಿ ಶ್ರೀರಕ್ಷಾ ವೆರ್ಣೇಕರ್ ಆಯ್ಕೆಯಾಗಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ ಅವರು ಶ್ರೀರಕ್ಷಾ ಅವರನ್ನು ಸನ್ಮಾನಿಸಿ, ಅಭಿನಂದಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ, ಕಾರ್ಯದರ್ಶಿ ರಾಜು ಭಂಡಾರಿ, ಯುವ ಮುಖಂಡ ಶ್ರೀಕಾಂತ್ ಬಗರೆ, ಕುರುಡಿಮಠ ಗಿರೀಶ್ (ಸ್ವಾಮಿ), ವಿಜಯರಾಜ್ ಉಪಸ್ಥಿತರಿದ್ದರು.

## ಅಧ್ಯಕ್ಷರಾಗಿ ಶಾಂತಕುಮಾರಿ

**(1ನೇ ಪುಟದಿಂದ)** ಜಿ.ಪಂ.ನ 29 ಸದಸ್ಯರ ಪೈಕಿ, ಸಂತೆಬೆನ್ನೂರು ಕ್ಷೇತ್ರದ ಸದಸ್ಯ ಪಿ. ವಾಗೀಶ್ ನಿಧನರಾಗಿದ್ದರಿಂದ ಸಂಖ್ಯಾಬಲ 28 ಕ್ಕೆ ಇಳಿದಿದೆ. ಈ ಪೈಕಿ ಚುನಾವಣಾ ವೇಳೆ 19 ಸದಸ್ಯರು ಹಾಜರಿದ್ದರು.

ಉಳಿದಂತೆ ಎಂ.ಆರ್. ಮಹೇಶ್, ಅರ್ಚನಾ ಬಸವರಾಜ, ಬಸವರಾಜ ಕೆ.ಎಸ್., ಜಿ.ಸಿ. ನಿಂಗಪ್ಪ ಹದಡಿ, ರೇಣುಕ ಕರಿಬಸಪ್ಪ, ಕೆ.ಹೆಚ್. ಓಬಳಪ್ಪ, ಬಿ. ಫಕ್ಕೀರಪ್ಪ, ತೇಜಸ್ವಿ ವಿ. ಪಟೇಲ್, ಎಂ. ಯೋಗೇಶ್ ಸೇರಿದಂತೆ 9 ಸದಸ್ಯರು ಗೈರು ಹಾಜರಾಗಿದ್ದರು.

ನೂತನ ಅಧ್ಯಕ್ಷರ ಅಧಿಕಾರ ಅವಧಿ ಡಿ.23 ರಿಂದ 2021 ರ ಮೇ 2 ರವರೆಗೆ ಸೀಮಿತವಾಗಿರುತ್ತದೆ ಎಂದು ಚುನಾವಣಾಧಿಕಾರಿ ತಿಳಿಸಿದರು. ಸಿಇಒ ಪದ್ಮಾ ಬಸವಂತಪ್ಪ, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಶಾಲೆಯಿಂದ ಹೊರಗೆ ಉಳಿದಿರುವ ಮಕ್ಕಳ ಮಾಹಿತಿ ನೀಡಲು ಕರೆ

ಮಲೇಬೆನ್ನೂರು, ಡಿ.23 - 6 ರಿಂದ 14 ವರ್ಷದ ಪ್ರತಿ ಮಗು 8 ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ.


ಆದ್ದರಿಂದ ಇಲ್ಲಿನ ಪುರಸಭೆ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ ಶಾಲೆಗೆ ಹಾಜರಾಗಲು ಮತ್ತು ಶಾಲಾ ಮುಖ್ಯವಾಹಿನಿಗೆ ತರಲು ಮನೆ-ಮನೆ ಸಮೀಕ್ಷೆ ಕೈಗೊಳ್ಳಲಾಗುವುದು. ಈ ವೇಳೆ ಪುರಸಭೆ ಸಿಬ್ಬಂದಿಗೆ ಮಕ್ಕಳ ಬಗ್ಗೆ ಅಗತ್ಯ ಮಾಹಿತಿ ನೀಡುವಂತೆ ಮುಖ್ಯಾಧಿಕಾರಿ ಧರಣೇಂದ್ರಕುಮಾರ್ ತಿಳಿಸಿದ್ದಾರೆ.

## ನೆಟ್ಟಿಗರ ಲೇವಡಿ

**(1ನೇ ಪುಟದಿಂದ)** ಜನ ಮನೆಯಿಂದ ಹೊರ ಬರದೇ ಇರುವ ಅವೇಳೆಯಲ್ಲಿ ಕರ್ಫ್ಯೂ ಹೇರಿದರೆ ಏನು ಪ್ರಯೋಜನ? ಕೇವಲ ದೆವ್ವ – ಪಿಶಾಚಿಗಳಿಗೆ ಕರ್ಫ್ಯೂ ಹೇರಿರುವಂತಿದೆ. ಇದು ಸರ್ಕಾರದ ತೋರಿಕೆಯ ಕ್ರಮವೇ ಹೊರತು ಜನಹಿತದ್ದಲ್ಲ ಎಂದು ಇನ್ನೊಬ್ಬರು ಕಿಡಿ ಕಾರಿದ್ದಾರೆ.

**ARADHYA STEEL PVT. LTD.,**
Near Anagodu, Davangere - 577 556.
ಕಂಪನಿಯಲ್ಲಿ ಕೆಲಸಗಾರರು ಬೇಕಾಗಿದ್ದಾರೆ
ವಯಸ್ಸು : 18 – 30ರ ಒಳಗೆ
ITI - Fitter (15), ITI - Electrician (4), ITI - Welder (5)
WET MACHINE Operator - (15)
WIRE DRAWING Operator - (20)
ಸಮಯ : ಬೆಳಿಗ್ಗೆ 10.00 ರಿಂದ 4.00
Contact No.:9113592331 / 8884620546
By - ARCO-HR Services, Davangere.

# ನಮ್ಗೆ ಇಷ್ಟ ಬಂದ ಹುಡ್ಗಿ ಮದ್ವೆ ಮಾಡ್ಕೊಳ್ತೀವಿ: ಇಬ್ರಾಹಿಂ



> ಚುನಾವಣೆ ಮುಖ್ಯವಲ್ಲ, ಸಾಮರಸ್ಯ-ಸೌಹಾರ್ದತೆ ಅವಶ್ಯ.
> - ಕೆ. ಅಬ್ದುಲ್ ಜಬ್ಬಾರ್

ಹರಿಹರ, ಡಿ.23 - ಹಿರಿಯರ ಒಪ್ಪಿಗೆ ಮೇರಿಗೆ ಮದ್ವೆ ಮಾಡಿ ಕೊಂಡಿದ್ದಾಯ್ತು, ಈಗ ಪರಿಸ್ಥಿತಿ ಹಾಗಿಲ್ಲ, ನಮ್ಗೆ ಇಷ್ಟ ಬಂದ ಹುಡ್ಗಿಯನ್ನು ಮದ್ವೆ ಮಾಡಿ ಕೊಳ್ತೀನಿ ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಹರಿಹರದಲ್ಲಿ ಹಾಸ್ಯ ಚಟಾಕಿ ಹಾರಿಸಿದರು.

ಬೀದರ್‌ನಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸುತ್ತಿದ್ದ ಅವರು, ಹರಿಹರದಲ್ಲಿ ಹಜರತ್ ಸೈಯದ್ ನಾಡಬಂದ್ ಷಾವಲಿ ದರ್ಗಾಕ್ಕೆ ಭೇಟಿ ನೀಡಿ ಮುಸ್ಲಿಂ ಮುಖಂಡರೊಂದಿಗೆ ಚರ್ಚೆ ನಡೆಸಿದರು.

ಈ ವೇಳೆ ಜನತಾವಾಣಿಯೊಂದಿಗೆ ಮಾತನಾಡಿದ ಅವರು, ನಾವು ಬಡವರು ಹಳೇ ಕಾರನ್ನೆ ರಿಪೇರಿ ಮಾಡಿಕೊಂಡು ಪ್ರಯಾಣ ಮಾಡ್ತೀವಿ. ಬ್ರೇಕ್ ಮಾತ್ರ ಕಂಟ್ರೋಲ್ ಆಗಿದ್ದರೆ ಸಾಕು ಎಂದು ಪರೋಕ್ಷವಾಗಿ ಕಾಂಗ್ರೆಸ್ ಬಿಟ್ಟು ಜಾತ್ಯತೀತ ಜನತಾದಳ ಸೇರುವ ಇಂಗಿತ ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಅಲ್ಪ ಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಹೆಚ್ಚಿನ ಅನುದಾನ ನೀಡಲು ಕೋರಿದ್ದೆ. ಆದರೆ ಇದಕ್ಕೆ ಅಂದಿನ ಸರ್ಕಾರ ಸ್ಪಂದಿಸಿಲ್ಲ, ಆ ನೋವು ನನಗೆ ಕಾಡುತ್ತಿದೆ. ಸಮುದಾಯಕ್ಕೆ ಅನ್ಯಾಯವಾದಾಗ ಸಹಿಸುವ ಶಕ್ತಿ ನನ್ನಲಿಲ್ಲ ಆ ಕಾರಣಕ್ಕಾಗಿ ನಾನು ತೆಗೆದುಕೊಂಡ ನಿರ್ಣಯ ಸೂಕ್ತ ಎಂಬ ಅಭಿಪ್ರಾಯ ನನ್ನದಾಗಿದೆ ಎಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವಗೌಡ ಅವರೊಂದಿಗೆ ಭೇಟಿ ಮಾಡಿ ಚರ್ಚಿಸಿದ್ದೇನೆ. ಮತ್ತೊಂದೆಡೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಸಹ ಚರ್ಚಿಸಿದ್ದಾರೆ. ಮುಂದಿನ ದಿನಗಳಲ್ಲಿ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಅಡ್ಡ ಗೋಡೆ ಮೇಲೆ ದೀಪವಿಟ್ಟಂತೆ ಹೇಳಿದರು.

ಹರಿಹರದಲ್ಲಿ ಅಂಜುಮನ್ ಚುನಾವಣೆ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಸದಸ್ಯತ್ವ ಶುಲ್ಕ 100 ರಿಂದ 1000 ರೂ ಗೆ ಏರಿಸಿದ್ದಾರೆ. ಕಡಿಮೆ ಮಾಡುವಂತೆ ಮಾಜಿ ಅಧ್ಯಕ್ಷ ಬಿ . ಮಹಮ್ಮದ್ ಫೈರೋಜ್ ಮನವಿಗೆ, ಬೆಂಗಳೂರಿನಲ್ಲಿ ಅಧಿಕಾರಿಯನ್ನು ಸಂಪರ್ಕಿಸಿ ವಿವರಿಸುತ್ತೇನೆ ಎಂದು ಹೇಳಿದರು.

ಜಿಲ್ಲಾ ವಕ್ಫ್ ಸಲಹಾ ಸಮಿತಿ ಅಧ್ಯಕ್ಷ ಸಿರಾಜ್ ಅಹ್ಮದ್, ಅಂಜುಮಾನ್ ಮಾಜಿ ಅಧ್ಯಕ್ಷ ಬಿ. ಮಹಮ್ಮದ್ ಫೈರೋಜ್ , ಖಾಜಿ ಖಬಿರುದ್ದೀನ್, ಎಂ.ಎಸ್. ಬಾಬು ಲಾಲ್, ಟಿಪ್ಪು ಸುಲ್ತಾನ್ ಸಮಿತಿ ಅಧ್ಯಕ್ಷ ಅಬ್ದುಲ್ ರೆಹಮಾನ್, ಸೈಯದ್ ಆಸೀಫ್, ನಾಡಬಂದ್ ಷಾ ದರ್ಗಾ ಸಮಿತಿ ಅಧ್ಯಕ್ಷ ಅಹಮ್ಮದ್ ಷಾ ಇತರರು ಉಪಸ್ಥಿತರಿದ್ದರು.

**ಶ್ರೀ ಶಿವಕುಮಾರಸ್ವಾಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
#1660/47-1, 1ನೇ ಮಹಡಿ, 12ನೇ ಕ್ರಾಸ್, ತರಳಬಾಳು ಬಡಾವಣೆ, ವಿದ್ಯಾನಗರ
ದಾವಣಗೆರೆ - 577 005. ಫೋನ್ : 08192-263129

**19ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್**

ನಮ್ಮ ಸೊಸೈಟಿಯ 2019-20ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು **ದಿನಾಂಕ 25.12.2020ರಂದು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ** ಸಂಘದ ಅಧ್ಯಕ್ಷರಾದ **ಶ್ರೀ ಎಸ್.ಜಿ. ಮಲ್ಲಿಕಾರ್ಜುನ್ ಬಾಬು** ಇವರ ಅಧ್ಯಕ್ಷತೆಯಲ್ಲಿ **ಶ್ರೀ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯ, ಅನುಭವ ಮಂಟಪ ಆವರಣ, ಹದಡಿ ರಸ್ತೆ, ದಾವಣಗೆರೆಯಲ್ಲಿ** ಏರ್ಪಡಿಸಲಾಗಿದೆ.

ಇತ್ತೀಚಿನ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಪ್ರಕಾರ ಸೊಸೈಟಿಯ ಸದಸ್ಯರು 5 ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗುವುದು ಮತ್ತು ಸೊಸೈಟಿಯಲ್ಲಿ ಕನಿಷ್ಠ ವ್ಯವಹಾರ ಮಾಡುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ಮುಂಬರುವ ಸೊಸೈಟಿಯ ಚುನಾವಣೆಯಲ್ಲಿ ಭಾಗವಹಿಸುವ ಹಕ್ಕನ್ನು ಕಳೆದುಕೊಳ್ಳುತ್ತೀರಿ. ಆದ್ದರಿಂದ ಎಲ್ಲರೂ ಸಭೆಗೆ ಹಾಜರಾಗಿ ಹಾಗೂ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಲು ಈ ಮೂಲಕ ವಿನಂತಿಸಿದೆ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಸಹಿ/- ಕಾರ್ಯದರ್ಶಿ

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ವಿನಂತಿಸಲಾಗಿದೆ. ಕೋವಿಡ್-19 ಸಾಂಕ್ರಾಮಿಕ ಕಾಯಿಲೆ ಇರುವುದರಿಂದ ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕಾಗಿ ವಿನಂತಿ. ಕೋವಿಡ್-19 ಪ್ರಯುಕ್ತ ಉಪಹಾರ, ಭೋಜನವಿರುವುದಿಲ್ಲ, ದಯವಿಟ್ಟು ಸದಸ್ಯರು ಸಹಕರಿಸಬೇಕಾಗಿ ವಿನಂತಿ.

# ಮಿಲ್ಲತ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

6/871/1ಎ, ಚೌಕಿಪೇಟೆ, ದಾವಣಗೆರೆ-1. ಫೋ : 257319, 235305

## 42ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನೋಟೀಸು

ಮಿಲ್ಲತ್ ಸಹಕಾರ ಬ್ಯಾಂಕಿನ 2019-20ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು **ದಿನಾಂಕ 24.12.2020ನೇ ಗುರುವಾರದಂದು ಬೆಳಿಗ್ಗೆ 11.00** ಗಂಟೆಗೆ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ **ಜನಾಬ್ ಸೈಯದ್ ಖಾಲಿದ್ ಅಹ್ಮದ್**‌ರವರ ಅಧ್ಯಕ್ಷತೆಯಲ್ಲಿ ದಾವಣಗೆರೆ ನಗರದ **ಬಾಷಾ ನಗರದಲ್ಲಿರುವ ಮಿಲ್ಲತ್ ಕಾಲೇಜ್ ಆವರಣದಲ್ಲಿ** ಏರ್ಪಡಿಸಲಾಗಿದೆ. ಆದ ಪ್ರಯುಕ್ತ ಮಾನ್ಯ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ, ಸಭೆಯ ಕಾರ್ಯ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿ.

## 2020-21ನೇ ಸಾಲಿನ ಆಡಳಿತ ಮಂಡಳಿ



**ಹಾಜಿ ಸೈಯದ್ ಸೈಫುಲ್ಲಾ**
ಸಂಸ್ಥಾಪಕರು


**ಶ್ರೀಮತಿ ಬಶೀರಾ ಜಾನ್**
ಉಪಾಧ್ಯಕ್ಷರು


**ಹಾಜಿ ಎನ್.ಕೆ. ಇಸ್ಮಾಯಿಲ್**
ನಿರ್ದೇಶಕರು



**ಎಸ್.ಎಂ ಸೈಯದ್**
ನಿರ್ದೇಶಕರು


**ಸೈಯದ್ ಖಾಲಿದ್ ಅಹ್ಮದ್**
ಅಧ್ಯಕ್ಷರು


**ಎನ್.ಕೆ. ಹಬೀಬ್**
ನಿರ್ದೇಶಕರು


**ಸೈಯದಾ ಕೌಸರ್ ಜಾನ್**
ನಿರ್ದೇಶಕರು


**ಸೈಯದ್ ಮುಸ್ತಾಫಾ**
ನಿರ್ದೇಶಕರು



**ಸೈಯದ್ ತಾಜ್‌ಪೀರ್**
ನಿರ್ದೇಶಕರು


**ಸಾಧಿಕ್ ಖಾನ್**
ನಿರ್ದೇಶಕರು


**ಜಾಕೀರ್ ಹುಸೇನ್**
ನಿರ್ದೇಶಕರು


**ಮೊಹ್ಮದ್ ಫಯಾಜ್ ಅಹಮದ್**
ನಿರ್ದೇಶಕರು


**ದಿಲೇರ್ ಖಾನ್**
ನಿರ್ದೇಶಕರು


**ರಾಕೇಶ್ ಜಿ.**
ನಿರ್ದೇಶಕರು


**ಗೋವಿಂದಪ್ಪ**
ನಿರ್ದೇಶಕರು


**ಶ್ರೀಮತಿ ಯಾಸ್ಮೀನ್ ಅಲಿ**
ನಿರ್ದೇಶಕರು


**ಸೈಯದ್ ಸಾದತ್**
ನಿರ್ದೇಶಕರು

## ದಿನಾಂಕ : 31ನೇ ಮಾರ್ಚ್ 2020ಕ್ಕೆ ಆಸ್ತಿ-ಜವಾಬ್ದಾರಿ ತಃಖ್ತೆ

| ಕ್ರ.ಸಂ. | ಬಂಡವಾಳ ಮತ್ತು ಜವಾಬ್ದಾರಿ | | 31.03.2020 ರೂ. ಪೈ. |
|---|---|---|---|
| 1) | ಷೇರು ಬಂಡವಾಳ : | | 2,01,43,135.00 |
| 2) | ಆಪದ್ಧನ ಮತ್ತು ನಿಧಿಗಳು : | | 2,78,15,111.31 |
| | ಎ. ಆಪದ್ಧನ ನಿಧಿ | 1,24,89,036.41 | |
| | ಬಿ. ಇತರೆ ನಿಧಿಗಳು | 33,99,848.26 | |
| | ಸಿ. ಕರಡು ಮತ್ತು ಅನುತ್ಪಾದಕ ಆಸ್ತಿ ನಿಧಿ | 1,19,26,226.64 | |
| 3) | ಠೇವಣಿಗಳು : | | 15,32,75,942.29 |
| | ಎ. ಖಾಯಂ ಠೇವಣಿಗಳು | 7,84,48,341.00 | |
| | ಬಿ. ಉಳಿತಾಯ ಖಾತೆ | 5,22,21,022.47 | |
| | ಸಿ. ಚಾಲ್ತಿ ಖಾತೆ | 44,18,005.82 | |
| | ಡಿ. ಇತರೆ ಠೇವಣಿಗಳು | 1,81,88,573.30 | |
| 4) | ಕಟ್ಟು ಬಾಕಿ ಬಡ್ಡಿ ಮೀಸಲು | | 50,47,536.00 |
| 5) | ಇತರೆ ಅವಕಾಶ ಕಲ್ಪಿಸಿರುವುದು | | 2,66,57,158.00 |
| 6) | ಬಿಲ್ ಕಲೆಕ್ಷನ್ ಬಂದಿರುವುದು : (ಕಾಂಟ್ರ ಪ್ರಕಾರ) | | 1,35,619.00 |
| 7) | ಠೇವಣಿಗಳ ಮೇಲೆ ಕೊಡಬೇಕಾದ ಬಡ್ಡಿ | | 28,68,828.22 |
| 8) | ಇತರೆ ಜವಾಬ್ದಾರಿಗಳು | | 6,92,20,192.11 |
| 9) | ಕೆ.ಎಸ್. ಮಹ್ಮದ್ ಜಿಕ್ರಿಯಾ ನಗದು ಗುಮಾಸ್ತರು ಇವರಿಂದ ವಸೂಲಿ | | 15,00,000.00 |
| 10) | ಲಾಭ ಮತ್ತು ನಷ್ಟ ಖಾತೆ : | | |
| | ಅನುತ್ಪಾದಕ ಆಸ್ತಿಗಳಿಗೆ ಕಾಯ್ದಿರಿಸಿರುವುದು | | 4,82,72,000.00 |
| 11) | ಆಸ್ತಿ ಮತ್ತು ಸ್ವತ್ತುಗಳು | | 9,49,000.00 |
| 12.) | ಅಪೆಕ್ಸ್ ಬ್ಯಾಂಕ್ ಚಾಲ್ತಿ ಖಾತೆ | | 18,61,813.68 |
| | ಒಟ್ಟು | | 35,77,46,335.61 |

ಸಾದಿಲ್ವಾರು ಜವಾಬ್ದಾರಿ ಸ್ವೀಕೃತ ಮತ್ತು ಇತರೆ ಬಾಧ್ಯತೆ : 70,500.00 ಹಾಗೂ ಡೆಫ್ ಖಾತೆ : 8,08,493.15

| ಕ್ರ.ಸಂ. | ಸ್ವತ್ತು ಮತ್ತು ಆಸ್ತಿ | | 31.03.2020 ರೂ. ಪೈ. |
|---|---|---|---|
| 1) | ನಗದು ಶಿಲ್ಕು ಕೈಯಲ್ಲಿ | | 14,03,475.00 |
| 2) | ಇತರೆ ಬ್ಯಾಂಕುಗಳಲ್ಲಿ: | | 1,30,14,859.88 |
| | ಎ. ಚಾಲ್ತಿ ಖಾತೆ | 96,33,512.88 | |
| | ಬಿ. ಮುದ್ಧತಿ ಠೇವಣಿ | 3,81,347.00 | |
| | ಸಿ. ಅಪೆಕ್ಸ್ ಬ್ಯಾಂಕಿನಲ್ಲಿ ಠೇವಣಿ | 30,00,000.00 | |
| 3) | ಹೂಡಿಕೆಗಳು : | | 5,80,45,457.50 |
| | ಎ) ಕೇಂದ್ರ ಸರ್ಕಾರದ ಭದ್ರತೆಗಳಲ್ಲಿ | 65,47,148.04 | |
| | ಬಿ) ರಾಜ್ಯ ಸರ್ಕಾರದ ಭದ್ರತೆಗಳಲ್ಲಿ | 2,94,73,309.46 | |
| | ಸಿ) ಡಿ.ಡಿ.ಸಿ.ಸಿ. ಬ್ಯಾಂಕಿನಲ್ಲಿ ಷೇರುಗಳು | 25,000.00 | |
| | ಡಿ) ಐ.ಡಿ.ಬಿ.ಐ. ಮುದ್ದತ್ತು ಠೇವಣಿ | 2,20,00,000.00 | |
| 4) | ಸಾಲಗಳು : | | 17,43,96,071.48 |
| | ಎ) ಅಲ್ಪಾವಧಿ ಸಾಲಗಳು | 5,64,79,680.30 | |
| | ಬಿ) ಮಧ್ಯಮಾವಧಿ ಸಾಲಗಳು | 11,79,16,391.00 | |
| 5) | ಬಿಲ್ಲುಗಳು ವಸೂಲಾಗತಕ್ಕದ್ದು (ಕಾಂಟ್ರಾ ಪ್ರಕಾರ) | | 1,35,619.00 |
| 6) | ಪೀಠೋಪಕರಣಗಳು : | | 18,86,882.87 |
| 7) | ಗಣಕ ಯಂತ್ರ ಮತ್ತು ತಂತ್ರಾಂಶ | | 31,89,281.66 |
| 8) | ವಾಹನ ಖಾತೆ | | 1,14,345.00 |
| 9) | ಬರಬೇಕಾದ ಬಡ್ಡಿ | | 50,47,536.00 |
| 10) | ಇತರೆ ಆಸ್ತಿಗಳು | | 1,18,73,005.53 |
| 11) | ಪೇ-ಆರ್ಡರ್ | | 9,45,246.40 |
| 12) | ಶಾಖೆಗಳ ಹೊಂದಾಣಿಕೆ | | 78,20,379.21 |
| 13) | ಅನುತ್ಪಾದಕ ಆಸ್ತಿ ಅವಕಾಶ ಕಲ್ಪಿಸಿರುವುದು | | 6,46,34,478.16 |
| 14) | 2019-20ನೇ ಸಾಲಿನ ನಿವ್ವಳ ನಷ್ಟ | | 1,52,39,697.92 |
| | ಒಟ್ಟು | | 35,77,46,335.61 |

ಸಾದಿಲ್ವಾರು ಜವಾಬ್ದಾರಿ ಸ್ವೀಕೃತ ಮತ್ತು ಇತರೆ ಬಾಧ್ಯತೆ : 70,500.00 ಹಾಗೂ ಡೆಫ್ ಖಾತೆ : 8,08,493.15

## ದಿನಾಂಕ : 31ನೇ ಮಾರ್ಚ್ 2020ಕ್ಕೆ ಅಖೈರಾದ ಲಾಭ ಮತ್ತು ನಷ್ಟ ತಃಖ್ತೆ

| ಖರ್ಚು | 31.03.2020 | ಆದಾಯ | 31.03.2020 |
|---|---|---|---|
| ಠೇವಣಿಗಳ ಮೇಲೆ ಮತ್ತು ಸಾಲದ ಮೇಲೆ ಕೊಟ್ಟ ಬಡ್ಡಿ | 34,37,754.00 | ಬಡ್ಡಿ ಮತ್ತು ಸೋಡಿ | 89,93,038.50 |
| ಸಂಬಳ ಭತ್ಯೆ ಮತ್ತು ಭವಿಷ್ಯ ನಿಧಿ | 46,10,449.00 | ಕಮೀಷನ್ ಮತ್ತು ಡಿಸ್ಕೌಂಟ್ | 950.00 |
| ಬಾಡಿಗೆ, ತೆರಿಗೆ, ವಿಮೆ ಮತ್ತು ವಿದ್ಯುಚ್ಛಕ್ತಿ | 14,94,337.00 | ಇತರೆ ಆದಾಯಗಳು | 95,60,970.94 |
| ಲೆಕ್ಕ ಪರಿಶೋಧನಾ ಶುಲ್ಕ | 4,87,000.00 | ಅನುತ್ಪಾದಕ ಆಸ್ತಿ ಅವಕಾಶ ಕಲ್ಪಿಸಿರುವುದು | 1,52,39,697.92 |
| ಅಂಚೆ, ತಂತಿ ಮತ್ತು ದೂರವಾಣಿ ಖರ್ಚು | 1,16,515.00 | 2019-20ನೇ ಸಾಲಿನ ನಿವ್ವಳ ನಷ್ಟ | |
| ಆಸ್ತಿ ಸವಕಳಿ | - | | |
| ಮುದ್ರಣ ಮತ್ತು ಸಾಮಗ್ರಿಗಳು | 1,64,991.00 | | |
| ಪಿಗ್ಮಿ ಕಮೀಷನ್ | 11,29,172.00 | | |
| ಇತರೆ ಖರ್ಚು | 22,04,439.00 | | |
| ಆದಾಯ ತೆರಿಗೆ ಪಾವತಿಸಿದ್ದು | - | | |
| ಅನುತ್ಪಾದಕ ಆಸ್ತಿ ಕಾಯ್ದಿರಿಸಿರುವುದು | 2,01,50,000.00 | | |
| ಒಟ್ಟು | 3,37,94,657.00 | ಒಟ್ಟು | 3,37,94,657.00 |

ಸಹಿ/- ಆಡಳಿತಾಧಿಕಾರಿಗಳು
**ಶ್ರೀ ಜಯಪ್ರಕಾಶ್,**
ಸಹಕಾರಿ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ.

ಸಹಿ/- **ವಿ. ರಾಮಚಂದ್ರಪ್ಪ**
ಪ್ರಧಾನ ವ್ಯವಸ್ಥಾಪಕರು

ಸಹಿ/- **ಸೈಯದ್ ಜಿಷಾನ್ ಅಲಿ**
ವ್ಯವಸ್ಥಾಪಕರು

## ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ

ನಾನು ಮಿಲ್ಲತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಚೌಕಿಪೇಟೆ, ದಾವಣಗೆರೆ ಇದರ ಕೇಂದ್ರ ಕಛೇರಿ, 4 ಶಾಖೆಗಳ ಮತ್ತು 1 ವಿಸ್ತರಣಾ ಶಾಖೆಯ (ಸಂಘಟಿತ) 2019-20ನೇ ಸಾಲಿನ ಲೆಕ್ಕ ಪರಿಶೋಧನೆ ಮಾಡಿರುತ್ತೇನೆ. ಇದಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರದ ಪುಸ್ತಕಗಳು, ಒದಗಿಸಿದ ವಿವರಗಳು, ಸ್ಪಷ್ಟೀಕರಣಗಳು ಮತ್ತು ನನ್ನ ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಇದರ ಜೊತೆ ಲಗತ್ತಿಸಿರುವ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ, ಲಾಭ-ನಷ್ಟ ತಃಖ್ತೆಯು ತಾರೀಖು 31.03.2020ಕ್ಕೆ ಇದ್ದಂತೆ ನನ್ನ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿ-ಗತಿಗಳನ್ನು ಪ್ರತಿಬಿಂಬಿಸುತ್ತದೆ ಎಂದು ದೃಢೀಕರಿಸುತ್ತೇನೆ.

**ಸ್ಥಳ : ದಾವಣಗೆರೆ,**
**ದಿನಾಂಕ : 21.09.2020**

ಸಹಿ/- **ತಾರಾನಾಥರಾವ್**
**ಚಾರ್ಟರ್ಡ್ ಅಕೌಂಟೆಂಟ್ಸ್**, ಬೆಂಗಳೂರು.

**ವಾರ್ಷಿಕ ಮಹಾಸಭೆಯ ಪ್ರಯುಕ್ತ ದಿ.24.12.2020ರ ಗುರುವಾರ ಬ್ಯಾಂಕ್‌ಗೆ ರಜೆ ಇರುತ್ತದೆ.**

ವಿ.ಸೂ. : ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ಅಭಿವೃದ್ಧಿಯತ್ತ ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ : ಅಧ್ಯಕ್ಷ ಉಮಾಪತಿ




ದಾವಣಗೆರೆ, ಡಿ.23- ನಗರದ ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯು ಅಭಿವೃದ್ಧಿ ಪಥದತ್ತ ಸಾಗುತ್ತಿದ್ದು, 2019-20ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ 34.51 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿದೆ. ಸದಸ್ಯರಿಗೆ ಶೇ. 10 ರಷ್ಟು ಷೇರು ಲಾಭಾಂಶವನ್ನು ಘೋಷಣೆ ಮಾಡಿದೆ ಎಂದು ಅಧ್ಯಕ್ಷ ಬಿ.ಸಿ.ಉಮಾಪತಿ ಹರ್ಷ ವ್ಯಕ್ತಪಡಿಸಿದರು.

ನಗರದ ಡಾ.ಸದ್ಯೋಜಾತ ಶಿವಚಾರ್ಯ ಮಹಾಸ್ವಾಮಿಗಳವರ ಮಠದ ಸಭಾಂಗಣದಲ್ಲಿ ಸಹಕಾರಿಯ 8ನೇ ವರ್ಷದ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೊರೊನಾ ಸಂಕಷ್ಟದಲ್ಲೂ ಸಹಕಾರಿಯ ಠೇವಣಿ ಸಂಗ್ರಹ ಹಾಗೂ ಸಾಲ ವಸೂಲಾತಿಯಲ್ಲಿ ಗಮನಾರ್ಹ ಪ್ರಗತಿ ಕಂಡಿದೆ. ಇದಕ್ಕೆ ಸದಸ್ಯರ ಸಹಕಾರ ಪ್ರಮುಖ ಕಾರಣ ಎಂದು ತಿಳಿಸಿದರು.

ಸಹಕಾರಿಯು ಷೇರು ಸಂಗ್ರಹಣೆಯಲ್ಲೂ ಗಮನಾರ್ಹ ಪ್ರಗತಿ ಕಂಡಿದ್ದು, ಕಳೆದ ಸಾಲಿನಲ್ಲಿ 92.40 ಲಕ್ಷ ರೂ. ಷೇರು ಬಂಡವಾಳವಿದ್ದು ಆರ್ಥಿಕ ವರ್ಷಾಂತ್ಯಕ್ಕೆ 1.01 ಕೋಟಿ ಷೇರು ಬಂಡವಾಳ ಹೊಂದಿದೆ. ಕಳೆದ ಸಾಲಿನಲ್ಲಿ 7.74 ಕೋಟಿ ರೂ. ಠೇವಣಿ ಸಂಗ್ರಹವಾಗಿದ್ದು, ವರ್ಷಾಂತ್ಯಕ್ಕೆ 8.49 ಕೋಟಿ ರೂ ಗಳ ಠೇವಣಿ ಸಂಗ್ರಹವಾಗಿದೆ. ಪ್ರಸ್ತುತ ಸಹಕಾರಿ 7.80 ಕೋಟಿ ರೂ.ಗಳ ಸಾಲವನ್ನು ಸದಸ್ಯರಿಗೆ ವಿತರಿಸಿದೆ ಎಂದು ತಿಳಿಸಿದರು.

ಇತ್ತೀಚೆಗೆ ನಿಧನರಾದ ಸಹಕಾರಿಯ ನಿರ್ದೇಶಕ ದಿ.ಹದಡಿ ನಟರಾಜ್, ಕಾರ್ಯದರ್ಶಿ ಕೆ.ಎಂ.ತೋಟದ್ ಅವರುಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಶ್ರೀಮತಿ ಗೀತಾ ಪ್ರಶಾಂತ್ ಆಹ್ವಾನ ಪತ್ರಿಕೆಯನ್ನು ಸಭೆಯ ಮುಂದೆ ಮಂಡಿಸಿದರು. ನಿರ್ದೇಶಕ ರವಿಕುಮಾರ್ ಪಿ.ವಿ. ಕಳೆದ ಸಾಲಿನ ಸಾಮಾನ್ಯ ಸಭೆಯ ನಡಾವಳಿ ಓದಿದರು. ಜಿ.ವಿ. ಸುಂಕದ್, ಆಡಳಿತ ವರದಿ ಮಂಡಿಸಿದರು. ಕಾರ್ಯದರ್ಶಿ ಚನ್ನಮಲ್ಲಿಕಾರ್ಜುನ್ ಕೆ. ಪಾಲನಾ ವರದಿಯನ್ನು ಮಂಡಿಸಿ ಸಭೆಯ ಅನುಮೋದನೆ ಪಡೆದರು. ಉಪಾಧ್ಯಕ್ಷ ಎಂ.ದೊಡ್ಡಪ್ಪ ಅವರು, ಲಾಭ ವಿಲೇವಾರಿಯ ಬಗ್ಗೆ ತಿಳಿಸಿ ಶೇ.10ರಷ್ಟು ಷೇರು ಲಾಭಾಂಶ ಘೋಷಿಸಿದರು. ಸಹಕಾರ್ಯದರ್ಶಿ ಎಂ. ಮಲ್ಲಿಕಾರ್ಜುನ್ ಮುಂಗಡ ಪತ್ರ ಮಂಡಿಸಿದರು. ನಿರ್ದೇಶಕ ಅಂದನೂರು ಮುರುಗೇಶಪ್ಪ ವಾರ್ಷಿಕ ಕಾರ್ಯಚರಣೆ ಯೋಜನೆ ಮಂಡಿಸಿದರು.

ನಿರ್ದೇಶಕರುಗಳಾದ ಮಲ್ಲನಗೌಡ ಎಸ್., ಹೆಚ್.ಎಸ್.ಅವ್ವಣ್ಣಪ್ಪ, ಚಂದ್ರಶೇಖರ್ ಬಾದಾಮಿ. ಶ್ರೀಮತಿ ವಿನುತಾ ಎಂ.ವಿ., ವಿಶೇಷ ಆಹ್ವಾನಿತರಾದ ಎಸ್.ಮಂಜುನಾಥ್ ಉಪಸ್ಥಿತರಿದ್ದರು. ಹಾಲೇಶ ಅಂಗಡಿ ವಂದಿಸಿದರು. ಅಂಗಡಿ ಸಂಗಮೇಶ್, ಕಲಿವೀರ ಕಳ್ಳಿಮನಿ ನಿರೂಪಿಸಿದರು.

# ಹರಪನಹಳ್ಳಿ ಟಿಎಪಿಸಿಎಂಎಸ್‌ಗೆ 10 ಲಕ್ಷ ರೂ. ಲಾಭ



ಹರಪನಹಳ್ಳಿ, ಡಿ.23- 2019-20ನೇ ಸಾಲಿನಲ್ಲಿ ಸಂಘವು ರಸಗೊಬ್ಬರ ಹಾಗೂ ಪೆಟ್ರೋಲ್ ಬಂಕ್ ವ್ಯವಹಾರ ಲಾಭ ಹಾಗೂ ಬಾಡಿಗೆ, ಬಿಡಿಪಿ ಯೋಜನೆಯಡಿಯಲ್ಲಿ ನಿವ್ವಳ ಲಾಭ ರೂ. 10,11,876 ಗಳಿಸಿದೆ ಎಂದು ಅಧ್ಯಕ್ಷ ಪಿ.ಪ್ರೇಮಕುಮಾರ್ ತಿಳಿಸಿದ್ದಾರೆ.

ಪಟ್ಟಣದ ಟಿಎಪಿಸಿಎಂಎಸ್ ಸಂಘದ ಆವರಣದಲ್ಲಿ 2019-20ನೇ ಸಾಲಿನ 90ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘದ ಚಟುವಟಿಕೆ ವಾಣಿಜ್ಯ ಮಳಿಗೆ, ಪೆಟ್ರೋಲ್ ಬಂಕ್ ಹಾಗು ಇತರೆ ವ್ಯವಹಾರಗಳಿಂದ ಆದಾಯ ಗಳಿಸುತ್ತಿದೆ. ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ (ಟಿಎಪಿಸಿಎಂಎಸ್) ಕೇವಲ ಆದಾಯಕ್ಕೆ ಸೀಮಿತವಾಗದೇ ರೈತರ ಬೇಡಿಕೆ ಹಾಗೂ ಅವರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಶ್ರಮಿಸುತ್ತಿದೆ. ಇನ್ನು ಮುಂದೆ ಇದರ ಜೊತೆಗೆ ರೈತರ ಉತ್ಪನ್ನಗಳಿಗೂ ಮಾರುಕಟ್ಟೆ ಒದಗಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ. ಶೀಘ್ರದಲ್ಲೇ ರೈತರು ಬೆಳೆದ ತೊಗರಿಯನ್ನು ಖರೀದಿಸಲು ಪ್ರಾರಂಭ ಮಾಡಲಿದ್ದೇವೆ. ಸರ್ಕಾರದಿಂದ ಲಭಿಸುವ ಅನುದಾನವನ್ನು ಪಡೆದು ರೈತರಿಗೆ ಅನುಕೂಲ ಮಾಡಿಕೊಡಲಾಗುವುದು. ಅನಿಯಂತ್ರಿತ ಆಹಾರ ಧಾನ್ಯ, ಸಗಟು ನಿಯಂತ್ರಿತ ಪಡಿತರ ವ್ಯವಹಾರಗಳನ್ನು ಪ್ರಾರಂಭಿಸಲು ಪ್ರಯತ್ನಿಸಲಾಗುವುದು. ರೈತರು ಹಾಗು ಸಂಘದ ಸದಸ್ಯರು ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರ ಖರೀದಿ ಮಾಡಿ ಸಂಘದ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದರು.

ಉಪಾಧ್ಯಕ್ಷ ತಳವಾರ ಮಂಜಪ್ಪ, ನಿರ್ದೇಶಕರಾದ ಬಿ.ಕೆ.ಪ್ರಕಾಶ್, ಕುಲುಮಿ ಅಬ್ದುಲ್ಲಾ, ಗಿಡ್ಡಹಳ್ಳಿ ನಾಗರಾಜ್, ಎಲ್.ಬಿ. ಹಾಲೇಶ್ ನಾಯ್ಕ್, ಬಿ.ರೇವಣ್ಣಸಿದ್ದಪ್ಪ, ಹೆಚ್. ತಿಮ್ಮನಾಯ್ಕ್, ಹಾರಕನಾಳು ಪ್ರಕಾಶಗೌಡ, ಮಂಜುಳಾ ಗುರುಮೂರ್ತಿ, ಹೆಚ್.ನೇತ್ರಾವತಿ, ಎಂ.ವಿ.ಕೃಷ್ಣಕಾಂತ್, ಕೆ.ವಿರುಪಾಕ್ಷಪ್ಪ, ಹನುಮಂತಪ್ಪ, ವಿ.ಬಸವರಾಜಪ್ಪ, ಕಾರ್ಯದರ್ಶಿ ಹೆಚ್.ತಿರುಪತಿ, ಸಿಬ್ಬಂದಿ ಟಿ.ಲೋಕನಾಥ್, ಕೆ.ಬಿ. ಗಾಯಿತ್ರಿ, ಸಂಗೀತ ಕೆ., ಎಸ್.ಶಫಿ ಹಾಗೂ ಇತರರು ಭಾಗಹಿಸಿದ್ದರು.

## ಇಂಜಿನಿಯರ್‌ಗೆ ಮಂಕುಬೂದಿ

**(1ನೇ ಪುಟದಿಂದ)** ಮಂಜುನಾಥ ರಾವ್ ವಂಚನೆಗೊಳಗಾದ ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್. ಎಂದಿನಂತೆ ಬೆಳಗ್ಗೆ 8 ಗಂಟೆಗೆ ವಾಯು ವಿಹಾರಕ್ಕೆ ಬಂದು ವಾಪಸ್ 9-15 ಗಂಟೆಗೆ ಮನೆ ಕಡೆಗೆ ಎಂಸಿಸಿ ಎ ಬ್ಲಾಕ್ 7ನೇ ಮೇನ್ ನಲ್ಲಿ ನಡೆದುಕೊಂಡು ಹೋಗುತ್ತಿದ್ದು, ಈ ವೇಳೆ ಬಂದ ವಂಚಕರಿಬ್ಬರು ಪೊಲೀಸರೆಂದು ನಂಬಿಸಿ ಬಂಗಾರವನ್ನು ಹಾಕಿಕೊಂಡು ಹೋಗಬಾರದೆಂದು ಹೇಳಿ ಕಾಳಜಿ ತೋರುವವರಂತೆ ನಟಿಸುತ್ತಾ, ಕೊರಳಲ್ಲಿದ್ದ 15 ಗ್ರಾಂ ತೂಕದ ಒಂದು ಎಳೆಯ 45 ಸಾವಿರ ಮೌಲ್ಯದ ಬಂಗಾರದ ಸರ, 8 ಗ್ರಾಂ ತೂಕದ 25 ಸಾವಿರ ಮೌಲ್ಯದ ಬಂಗಾರದ ನವರತ್ನದ ಹಾರ ಹಾಗೂ ಕೈ ಬೆರಳಲ್ಲಿದ್ದ 10 ಗ್ರಾಂ ತೂಕದ 30 ಸಾವಿರ ಮೌಲ್ಯದ ಬಂಗಾರದ ನವಗ್ರಹದ ಒಂದು ಉಂಗುರ, ವಾಚ್, ಮೊಬೈಲ್ ತೆಗೆಸಿ ಕರವಸ್ತ್ರದಲ್ಲಿ ಹಾಕಿ ಕೊಟ್ಟಂತೆ ನಾಟಕವಾಡಿ ಬೈಕಿನಲ್ಲಿ ಜೋರಾಗಿ ಪರಾರಿಯಾಗಿದ್ದಾರೆ. ನಂತರ ಕರವಸ್ತ್ರವನ್ನು ತೆಗೆದು ನೋಡಿದಾಗ ಬಂಗಾರದ ಆಭರಣಗಳು ಇರಲಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ.

## ರೈತರ ದಿನವಾಗಿ ಅಟಲ್‌ಜೀ ಜನ್ಮ ದಿನ

**(1ನೇ ಪುಟದಿಂದ)** ಎನ್ನುವುದನ್ನು ಮನದಟ್ಟು ಮಾಡುತ್ತಾರೆ. ಅಂದು ಇಡೀ ರಾಜ್ಯಾದ್ಯಂತ ಸಚಿವರು, ಶಾಸಕರು, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಂದಿರುವ ಕೃಷಿ ಕಾಯ್ದೆಗಳ ಬಗ್ಗೆ ರೈತರಿಗೆ ಮನದಟ್ಟು ಮಾಡಿಕೊಡಲಿದ್ದಾರೆ ಎಂದರು.


ಇದೇ ಸಂದರ್ಭದಲ್ಲಿ ಮಾತನಾಡಿದ ಅವರು, ಎಪಿಎಂಸಿ ಮುಚ್ಚುವ ಪ್ರಶ್ನೆಯೇ ಇಲ್ಲ. ಯಾರಿಗೂ ಅದರಿಂದ ತೊಂದರೆಯಾಗದು. ಎಪಿಎಂಸಿಯನ್ನು ಇನ್ನೂ ಮೇಲ್ದರ್ಜೆಗೇರಿಸುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಎಂದು ತಿಳಿಸಿದರು.

ಇದಕ್ಕಾಗಿ ನಬಾರ್ಡ್ 205 ಕೋಟಿ ರೂಪಾಯಿ ಅನುದಾನ ನೀಡಿದೆ. ಅಲ್ಲದೆ, 35 ಪೈಸೆಗೆ ಇಳಿಸಿದ್ದ ಸೆಸ್ ಅನ್ನು ವರ್ತಕರು ಹಾಗೂ ಪ್ರತಿಪಕ್ಷಗಳ ಆಗ್ರಹದ ಮೇರೆಗೆ 1 ರೂಪಾಯಿಗೆ ಏರಿಸಿ ಮುಖ್ಯಮಂತ್ರಿಗಳು ತೀರ್ಮಾನ ತೆಗೆದುಕೊಂಡಿದ್ದಾರೆ. ಹೀಗಾಗಿ ಆದಾಯದಲ್ಲಿ ನಷ್ಟ ಎಂಬ ಮಾತು ಇನ್ನು ಬಾರದು ಎಂದು ಸಚಿವ ಸೋಮಶೇಖರ್ ತಿಳಿಸಿದರು.

## ಹರಪನಹಳ್ಳಿ ಪುರಸಭೆ ಆಯವ್ಯಯ ಸಲಹೆ ಸೂಚನೆಗೆ 30ರಂದು ಸಭೆ

ಹರಪನಹಳ್ಳಿ, ಡಿ.23 - ಆಯವ್ಯಯ ಅಂದಾಜು ಪತ್ರಿಕೆಯನ್ನು ತಯಾರಿಸುವ ಸಲುವಾಗಿ ಸಾರ್ವನಿಕರು ಮತ್ತು ಸಂಘ ಸಂಸ್ಥೆಗಳಿಂದ ಸಲಹೆಗಳನ್ನು ಪಡೆಯಲು ಇದೇ ದಿನಾಂಕ 30ರಂದು ಮಧ್ಯಾಹ್ನ 3 ಗಂಟೆಗೆ ಪುರಸಭೆಯ ಸಭಾಂಗಣದಲ್ಲಿ ಸಭೆಯನ್ನು ಆಯೋಜಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ನಾಗರಾಜನಾಯ್ಕ ಬಿ.ಆರ್. ತಿಳಿಸಿದ್ದಾರೆ.

## ಚಂದ್ರಪ್ಪಗೆ ಎರಡು ಬಂಗಾರ ಪದಕ



ದಾವಣಗೆರೆ, ಡಿ.23- ಮಹಾರಾಷ್ಟ್ರದ ಅಮರಾವತಿಯ ಡಿವಿಷನಲ್ ಸ್ಪೋರ್ಟ್ಸ್ ಇಂಡೋರ್ ಸ್ಟೇಡಿಯಂನಲ್ಲಿ ನಡೆದ ನಾಲ್ಕು ದಿನಗಳ 21ನೇ ಅಂತರರಾಷ್ಟ್ರೀಯ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ ಬೆಂಚ್ ಪ್ರೆಸ್ ಮತ್ತು ಡೆಡ್ ಲಿಫ್ಟ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನಗರದ ಬೀರೇಶ್ವರ ವ್ಯಾಯಾಮ ಶಾಲೆಯ ಪವರ್ ಲಿಫ್ಟರ್ ಎ. ಚಂದ್ರಪ್ಪ ಅವರಿಗೆ ಎರಡು ಬಂಗಾರದ ಪದಕಗಳು ಲಭಿಸಿವೆ. 75 ಕೆ.ಜಿ. ವಿಭಾಗದಲ್ಲಿ ಡೆಡ್ ಲಿಫ್ಟ್ ಹಾಗೂ ಪವರ್ ಲಿಫ್ಟಿಂಗ್ ವಿಭಾಗದಲ್ಲಿ ಮಾಸ್ಟರ್-2 ಸ್ಪರ್ಧೆಯಲ್ಲಿ ಒಟ್ಟು 400 ಕೆ.ಜಿ. ಭಾರವನ್ನು ಎತ್ತುವುದರ ಮೂಲಕ ಪ್ರಥಮ ಸ್ಥಾನವನ್ನು ಪಡೆದು ಎರಡು ಬಂಗಾರದ ಪದಕಗಳಿಗೆ ಭಾಜನರಾಗಿದ್ದಾರೆ.

## ಪವರ್ ಲಿಫ್ಟಿಂಗ್‌ನಲ್ಲಿ ಸಿ. ದಿವ್ಯಾಗೆ ಬೆಳ್ಳಿ



ದಾವಣಗೆರೆ, ಡಿ.23- ಮಹಾರಾಷ್ಟ್ರದ ಅಮರಾವತಿಯ ಡಿವಿಷನಲ್ ಸ್ಪೋರ್ಟ್ಸ್ ಇಂಡೋರ್ ಸ್ಟೇಡಿಯಂನಲ್ಲಿ ನಡೆದ ನಾಲ್ಕು ದಿನಗಳ 21ನೇ ಅಂತರರಾಷ್ಟ್ರೀಯ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ ಬೆಂಚ್ ಪ್ರೆಸ್ ಮತ್ತು ಡೆಡ್ ಲಿಫ್ಟ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನಗರದ ಬೀರೇಶ್ವರ ವ್ಯಾಯಾಮ ಶಾಲೆಯ ಪವರ್ ಲಿಫ್ಟರ್ ಹಾಗೂ ಬಿ.ಎಸ್. ಚನ್ನಬಸಪ್ಪ ಪದವಿ ಕಾಲೇಜು ವಿದ್ಯಾರ್ಥಿನಿ ಸಿ. ದಿವ್ಯ 52 ಕೆ.ಜಿ. ವಿಭಾಗದಲ್ಲಿ ಸಬ್-ಜ್ಯೂನಿಯರ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಒಟ್ಟು 235 ಕೆ.ಜಿ. ಭಾರವನ್ನು ಎತ್ತುವುದರ ಮೂಲಕ ದ್ವಿತೀಯ ಸ್ಥಾನ ಪಡೆದು ಬೆಳ್ಳಿ ಪದಕಕ್ಕೆ ಭಾಜನರಾಗಿದ್ದಾರೆ. ದಿವ್ಯ, ರಾಷ್ಟ್ರೀಯ ಪವರ್ ಲಿಫ್ಟರ್ ಕೆ. ಚಂದ್ರಪ್ಪ ಹಾಗೂ ರಾಜೇಶ್ವರಿ ಅವರ ಪುತ್ರಿ.

# ಅಯೋಧ್ಯೆ ಮಸೀದಿ ನಿರ್ಮಾಣ 'ಅಕ್ರಮ': ಜಿಲಾನಿ

ಅಯೋಧ್ಯೆ, ಡಿ. 23 – ಸುಪ್ರೀಂ ಕೋರ್ಟ್ ಆದೇಶದಂತೆ ಅಯೋಧ್ಯೆಯಲ್ಲಿ ಮಸೀದಿ ನಿರ್ಮಿಸಲು ಮುಂದಾಗಿರುವುದು ವಕ್ಫ್ ಕಾಯ್ದೆಗೆ ವಿರುದ್ಧ ಹಾಗೂ ಶರಿಯತ್ ಕಾಯ್ದೆಗಳ ಅನ್ವಯ ಅಕ್ರಮ ಎಂದು ಅಖಿಲ ಭಾರತ ಮುಸ್ಲಿಮ್ ವೈಯಕ್ತಿಕ ಕಾನೂನು ಮಂಡಳಿ (ಎ.ಐ.ಎಂ.ಪಿ.ಎಲ್.ಬಿ.) ಸದಸ್ಯ ಜಫರ್ಯಾಬ್ ಜಿಲಾನಿ ಹೇಳಿದ್ದಾರೆ.

ಆದರೆ, ಈ ವಾದವನ್ನು ತಳ್ಳಿ ಹಾಕಿರುವ ಅಯೋಧ್ಯೆಯಲ್ಲಿ ಮಸೀದಿ ನಿರ್ಮಿಸುತ್ತಿರುವ ಟ್ರಸ್ಟ್ ಕಾರ್ಯದರ್ಶಿ ಅಥರ್ ಹುಸೇನ್, ಪ್ರತಿಯೊಬ್ಬರೂ ಶರಿಯತ್ ಅನ್ನು ತಮ್ಮದೇ ದೃಷ್ಟಿಕೋನದಲ್ಲಿ ವ್ಯಾಖ್ಯಾನಿಸುತ್ತಾರೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನೀಡಲಾಗಿರುವ ಜಮೀನು ಅಕ್ರಮವಾಗದು ಎಂದಿದ್ದಾರೆ.

ಅಯೋಧ್ಯೆಯ ಧನ್ನಿಪುರ ಹಳ್ಳಿಯಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ಐದು ಎಕರೆ ಜಮೀನು ನೀಡಲಾಗಿದೆ. ಇಲ್ಲಿ ಇಂಡೋ - ಇಸ್ಲಾಮಿಕ್ ಕಲ್ಚರ್ ಫೌಂಡೇಷನ್ (ಐ.ಐ.ಸಿ.ಎಫ್.) ವತಿಯಿಂದ ನಿರ್ಮಿಸಲಾಗುತ್ತಿರುವ ಮಸೀದಿಯ ನೀಲ ನಕ್ಷೆಯನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಗಿತ್ತು.

ಈ ಸ್ಥಳದಲ್ಲಿ ಮಸೀದಿಯ ಜೊತೆಗೆ ಆಸ್ಪತ್ರೆ ಮತ್ತಿತರೆ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಇದಕ್ಕಾಗಿ ಉತ್ತರ ಪ್ರದೇಶ ರಾಜ್ಯದ ಸುನ್ನಿ ಕೇಂದ್ರ ವಕ್ಫ್ ಮಂಡಳಿಯು ಐ.ಐ.ಸಿ.ಎಫ್. ರಚಿಸಿದೆ.

ವಕ್ಫ್ ಕಾಯ್ದೆಯ ಪ್ರಕಾರ ಮಸೀದಿ ಇಲ್ಲವೇ ಮಸೀದಿಯ ಜಮೀನನ್ನು ವಿನಿಮಯ ಮಾಡಿಕೊಳ್ಳಲಾಗದು. ಅಯೋಧ್ಯೆಯಲ್ಲಿ ಮಸೀದಿ ನಿರ್ಮಿಸುತ್ತಿರುವುದು ಕಾಯ್ದೆಯ ಉಲ್ಲಂಘನೆ. ಇದು ಶರಿಯತ್ ಕಾಯ್ದೆಯ ಉಲ್ಲಂಘನೆ ಎಂದು ಜಿಲಾನಿ ಹೇಳಿದ್ದಾರೆ. ಅವರು ಬಾಬ್ರಿ ಮಸೀದಿ ಕ್ರಿಯಾ ಸಮಿತಿ ಸಂಚಾಲಕರೂ ಆಗಿದ್ದಾರೆ.

ಎ.ಐ.ಎಂ.ಪಿ.ಎಲ್.ಬಿ.ಯ ಇನ್ನೋರ್ವ ಕಾರ್ಯಕಾರಿ ಸದಸ್ಯ ಇಲ್ಯಾಸ್ ಹೇಳಿಕೆ ನೀಡಿದ್ದು, ನಾವು ಬೇರೆಡೆ ಮಸೀದಿಗೆ ಜಾಗ ನೀಡುವ ಪ್ರಸ್ತಾಪವನ್ನು ತಿರಸ್ಕರಿಸುತ್ತೇವೆ. ನಾವು ಪ್ರಕರಣದಲ್ಲಿ ಸೋತಿದ್ದೇವೆ, ನಮಗೆ ಮಸೀದಿಗೆ ಜಾಗ ಬೇಡ ಎಂದಿದ್ದಾರೆ.

ಕಳೆದ ಅಕ್ಟೋಬರ್ 13ರಂದು ಕರೆಯಲಾಗಿದ್ದ ಎ.ಐ.ಎ.ಪಿ.ಎಲ್. ಸಭೆಯಲ್ಲಿ ಸಂಸದ ಅಸಾದುದ್ದೀನ್ ಒವೈಸಿ ಅವರು ಈ ವಿಷಯ ಪ್ರಸ್ತಾಪಿಸಿದ್ದರು. ಜಾಗ ವಿನಿಮಯ ಮಾಡಿಕೊಳ್ಳುವುದು ಶರಿಯತ್ ಕಾಯ್ದೆಯ ಅನ್ವಯ ಅಕ್ರಮ ಎಂದು ಸಭೆಯಲ್ಲಿದ್ದ ಎಲ್ಲರೂ ಅಭಿಪ್ರಾಯ ಪಟ್ಟಿದ್ದರು. ಆದರೆ, ಈ ವಾದವನ್ನು ಒಪ್ಪದ ಹುಸೇನ್, ಶರಿಯತ್ ವ್ಯಾಖ್ಯಾನಿಸುವ ಅಧಿಕಾರ ಕೆಲವೇ ವ್ಯಕ್ತಿಗಳ ಕೈಯಲ್ಲಿಲ್ಲ. ಮಸೀದಿ ಎಂದರೆ ನಮಾಜ್ ಮಾಡುವ ಸ್ಥಳ. ನಾವು ಮಸೀದಿ ನಿರ್ಮಿಸುವುದರಲ್ಲಿ ತಪ್ಪೇನಿದೆ? ಎಂದು ಕೇಳಿದ್ದಾರೆ.

## ಹೊನ್ನಾಳಿ : ಮೊಬೈಲ್ ಆ್ಯಪ್‌ನಲ್ಲಿ ಶಾಲೆ ಬಿಟ್ಟ ಮಕ್ಕಳ ತಪಾಸಣೆ



ಹೊನ್ನಾಳಿ, ಡಿ.23- ಪಟ್ಟಣದಲ್ಲಿ ಒಂದರಿಂದ 14 ವರ್ಷದೊಳಗಿನ ಶಾಲೆ ಬಿಟ್ಟ ಮಕ್ಕಳ ತಪಾಸಣೆಯನ್ನು ಪಟ್ಟಣ ಪಂಚಾಯಿತಿ ಸಿಬ್ಬಂದಿಗಳು ನಿರ್ವಹಿಸಿದರು. ಸರ್ಕಾರದ ಆದೇಶದಂತೆ ತುಂಗಭದ್ರ ಬಡಾವಣೆಯಲ್ಲಿ ಮೊಬೈಲ್ ಆ್ಯಪ್ ಮೂಲಕ ಡಿಸೆಂಬರ್ 21 ರಿಂದ ಶಾಲೆ ಬಿಟ್ಟ ಮಕ್ಕಳ ತಪಾಸಣೆಗೆ ಮುಂದಾಗಿರುವ ಸಿಬ್ಬಂದಿಗಳು ಈವರೆಗೂ ಶಾಲೆಯಿಂದ ಹೊರಗುಳಿದ ಮಕ್ಕಳು ಪತ್ತೆಯಾಗಿಲ್ಲ ಎಂದು ತಿಳಿದುಬಂದಿದೆ.

ಪಂಚಾಯಿತಿ ಮುಖ್ಯಾಧಿಕಾರಿ ವೀರಭದ್ರಯ್ಯ, ಸದಸ್ಯ ಶ್ರೀಧರ್, ಸಿಬ್ಬಂದಿಗಳಾದ ರಾಮಚಂದ್ರ, ನಾಗೇಶ್ ಇನ್ನಿತರರು ಹಾಜರಿದ್ದರು.

## ಉಕ್ಕಡಗಾತ್ರಿ ಗ್ರಾ.ಪಂ.ಗೆ ಮೂವರು ಅವಿರೋಧ ಆಯ್ಕೆ

ಮಲೇಬೆನ್ನೂರು, ಡಿ.23 - ಉಕ್ಕಡಗಾತ್ರಿ ಗ್ರಾ.ಪಂ ನ ಒಟ್ಟು 12 ಸ್ಥಾನಗಳಲ್ಲಿ 3 ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿದ್ದು, ಉಳಿದ 9 ಸ್ಥಾನಗಳಿಗೆ 27 ರಂದು ಚುನಾವಣೆ ಜರುಗಲಿದೆ. ಉಕ್ಕಡಗಾತ್ರಿ ಗ್ರಾಮದ 1ನೇ ವಾರ್ಡ್‌ನ ಬಿಸಿಎಂ 'ಎ' ಕ್ಷೇತ್ರದಿಂದ ಶಂಕ್ರಪ್ಪ ಕಮದೋಡು, 2ನೇ ವಾರ್ಡ್‌ನ ಎಸ್ಸಿ ಮೀಸಲು ಕ್ಷೇತ್ರದಿಂದ ಶ್ರೀಮತಿ ಭಾರತಿ ಕಟಿಗೇರ , ಬಿಸಿಎಂ 'ಎ' ಮಹಿಳಾ ಕ್ಷೇತ್ರದಿಂದ ಶ್ರೀಮತಿ ಸಾಕಮ್ಮ ಹೊಟ್ಟೇರ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಕ್ಕಡಗಾತ್ರಿಯಲ್ಲಿ ಉಳಿದ 3 ಸ್ಥಾನಗಳಿಗೆ 9 ಅಭ್ಯರ್ಥಿಗಳು ಮತ್ತು ನಂದಿಗುಡಿಯಲ್ಲಿ 3 ಸ್ಥಾನಗಳಿಗೆ 6 ಅಭ್ಯರ್ಥಿಗಳು ಹಾಗೂ ಗೋವಿನಹಾಳ್‌ನಲ್ಲಿ 3 ಸ್ಥಾನಗಳಿಗೆ 8 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.

## ಎಪಿಆರ್‌ಒ ತರಬೇತಿ ಕೇಂದ್ರಕ್ಕೆ ಭೇಟಿ




ಕೊಟ್ಟೂರು, ಡಿ.23- ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಗೆ ನೇಮಿಸಿದ ಪಿ.ಆರ್.ಒ ಹಾಗೂ ಎ.ಪಿ.ಆರ್.ಒ. ಸಿಬ್ಬಂದಿಯ ತರಬೇತಿಗೆ ಆಗಮಿಸಿದ ಚುನಾವಣಾ ವೀಕ್ಷಕ ಕೆ.ಎಂ.ಸುರೇಶ್ ಅವರು ವೀಕ್ಷಣೆ ಮಾಡುತ್ತಾ, ಪಾಲಿಸಬೇಕಾದ ಕೆಲವೊಂದು ಸೂಕ್ಷ್ಮ ಮಾಹಿತಿ ನೀಡಿದರು.

## ಬ್ರಿಟನ್‌ನಲ್ಲಿ ಉಲ್ಬಣಿಸಿದ ಕೊರೊನಾ; ಇನ್ನಷ್ಟು ನಿರ್ಬಂಧ ಸಾಧ್ಯತೆ

ಲಂಡನ್, ಡಿ.23- ಬ್ರಿಟನ್‌ನ ಬಹುತೇಕ ಭಾಗಗಳು ಕಠಿಣ ಲಾಕ್ ಡೌನ್‌ಗೆ ಸಿಲುಕಿರುವಾಗಲೇ, ಇನ್ನಷ್ಟು ನಿರ್ಬಂಧಗಳನ್ನು ಹೇರಲು ಸಚಿವರು ಪರಿಶೀಲನೆ ನಡೆಸುತ್ತಿದ್ದಾರೆ. ನಿರ್ಬಂಧಗಳ ನಡುವೆಯೇ, ಬ್ರಿಟನ್ ನಲ್ಲಿ ಒಂದೇ ದಿನ 36,804 ಕೊರೊನಾ ಸೋಂಕುಗಳು ಕಂಡು ಬಂದಿವೆ. ಒಂದೇ ದಿನ ಇಷ್ಟೊಂದು ಸೋಂಕಿತರು ಕಂಡು ಬಂದಿರುವುದು ಇದೇ ಮೊದಲು. ಕೊರೊನಾ ಸೋಂಕಿನ ಹೊಸ ರೂಪದ ಕಾರಣದಿಂದಾಗಿ ಇಷ್ಟೊಂದು ಸಂಖ್ಯೆಯ ಜನರು ಸೋಂಕಿತರಾಗಿದ್ದಾರೆ. ಆದರೆ, ಬಹುತೇಕ ಸೋಂಕಿತರು ಲಂಡನ್ ಹಾಗೂ ವಾಯುವ್ಯ ಇಂಗ್ಲೆಂಡ್‌ಗೆ ಸೀಮಿತವಾಗಿದ್ದಾರೆ ಎಂದು ಬ್ರಿಟನ್ ಸಂಪರ್ಕ ಕಾರ್ಯದರ್ಶಿ ರಾಬರ್ಟ್ ಜೆನ್‌ರಿಕ್ ಹೇಳಿದ್ದಾರೆ.

## ಆರ್‌ಟಿಓ : ಶಿಬಿರದ ಸ್ಥಳ ಮತ್ತು ದಿನಾಂಕ ಮರುನಿಗದಿ

ದಾವಣಗೆರೆ, ಡಿ.23- 2021 ನೇ ವರ್ಷದಲ್ಲಿ ದಾವಣಗೆರೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ವತಿಯಿಂದ ತಾಲ್ಲೂಕುಗಳಲ್ಲಿ ನಿಗದಿಪಡಿಸಲಾಗಿದ್ದ ಶಿಬಿರಗಳ ದಿನಾಂಕ ಮತ್ತು ಸ್ಥಳಗಳನ್ನು ಸಾರಥಿ-4 ಮತ್ತು ವಾಹನ-4 ಸಾಫ್ಟ್‌ವೇರ್ ಅಳವಡಿಕೆ ಹಿನ್ನೆಲೆಯಲ್ಲಿ ಕೆಳಕಂಡಂತೆ ಮರು ನಿಗದಿ ಪಡಿಸಲಾಗಿರುತ್ತದೆ.

ಶಿಬಿರ ನಡೆಸುವ ಸ್ಥಳ ಮತ್ತು ದಿನಾಂಕ: ಮಲೇಬೆನ್ನೂರಿನ ನೀರಾವರಿ ಇಲಾಖೆಯ ಸಬ್‌ಡಿವಿಜನ್ ಕಚೇರಿ ಆವರಣ ಇಲ್ಲಿ ಪ್ರತಿ ತಿಂಗಳು 08ನೇ ದಿನಾಂಕ. ಚನ್ನಗಿರಿ ಎಪಿಎಂಸಿ ಪ್ರತಿ ತಿಂಗಳು 14ನೇ ದಿನಾಂಕ. ನ್ಯಾಮತಿ ಎಪಿಎಂಸಿ ಆವರಣ ಪ್ರತಿ ತಿಂಗಳು 16ನೇ ದಿನಾಂಕ. ಹರಿಹರ ಎಪಿಎಂಸಿ ಪ್ರತಿ ತಿಂಗಳು 18ನೇ ವಾರ. ಜಗಳೂರು ಎಪಿಎಂಸಿ ಆವರಣ ಪ್ರತಿ ತಿಂಗಳು 25ನೇ ದಿನಾಂಕ. ಹೊನ್ನಾಳಿ ಎಪಿಎಂಸಿ ಆವರಣ ಪ್ರತಿ ತಿಂಗಳು 28ನೇ ದಿನಾಂಕ.

ಈ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ ಒಂದು ದಿನ ಮುಂಚಿತವಾಗಿ ಶಿಬಿರವನ್ನು ನಡೆಸಲಾಗುವುದು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ತಿಳಿಸಿದ್ದಾರೆ.

# ಕೊರೊನಾ ಸಂದರ್ಭದಲ್ಲೂ ಪ್ರಗತಿಯನ್ನು ಕಾಯ್ದುಕೊಂಡ ವಿಶ್ವಕರ್ಮ ಕ್ರೆಡಿಟ್ ಸೊಸೈಟಿ

### ಸಂಘದ 23ನೇ ವರ್ಷದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಬಿ.ವಿ. ಶಿವಾನಂದ್ ಹರ್ಷ

ದಾವಣಗೆರೆ,ಡಿ.23- ವಿಶ್ವವನ್ನೇ ತಲ್ಲಣಗೊಳಿಸಿದ ಕೊರೊನಾ ವೈರಸ್ ಸಂದರ್ಭದಲ್ಲೂ ನಗರದ ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಪ್ರಗತಿಯನ್ನು ಕಾಯ್ದುಕೊಂಡಿದೆ ಎಂದು ಸಂಘದ ಆಡಳಿತ ಮಂಡಳಿ ಅಧ್ಯಕ್ಷ ಬಿ.ವಿ. ಶಿವಾನಂದ್ ಸಂತಸ ವ್ಯಕ್ತಪಡಿಸಿದ್ದಾರೆ.



ಸಂಘದ ಮುಖ್ಯ ಕಚೇರಿಯಲ್ಲಿ ಮೊನ್ನೆ ಏರ್ಪಾಡಾಗಿದ್ದ ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 2019-20ನೇ ಸಾಲಿನ 23ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಸ್ಥೆಗೆ ಸ್ವಂತ ಕಟ್ಟಡವನ್ನು ಹೊಂದುವ ನಿಟ್ಟಿನಲ್ಲಿ ಪ್ರಸಕ್ತ ಅವಧಿಯಲ್ಲಿ ನಿವೇಶನ ಖರೀದಿಸಲು ಸಿದ್ಧತೆ ನಡೆಸಲಾಗಿತ್ತು. ಆದರೆ, ಆಕಸ್ಮಿಕವಾಗಿ ಬಂದೊದಗಿದ ಕೊರೊನಾದಿಂದಾಗಿ ಸಂಘದ ಪ್ರಗತಿಯನ್ನು ಕಾಯ್ದುಕೊಳ್ಳುವುದು ಮುಖ್ಯ ಉದ್ದೇಶವಾಗಿತ್ತು. ಆ ನಿಟ್ಟಿನಲ್ಲಿ ಫಲಪ್ರದವಾಗಿದೆ. ಮುಂದಿನ ವಾರ್ಷಿಕ ಮಹಾಸಭೆಯ ವೇಳೆಗೆ ನಿವೇಶನ ಖರೀದಿಸಲಾಗುವುದು ಎಂದು ಅವರು ತಿಳಿಸಿದರು.

ಸಂಘದ ಪ್ರಗತಿ ಕುರಿತಂತೆ ಅಂಕಿ - ಅಂಶಗಳೊಂದಿಗೆ ಮಾತನಾಡಿದ ಶಿವಾನಂದ್, 2020, ಮಾರ್ಚ್ ಅಂತ್ಯಕ್ಕೆ 50 ಲಕ್ಷ ರೂ. ಷೇರು ಬಂಡವಾಳ ಹೊಂದಿದ್ದು, 5.40 ಕೋಟಿ ರೂ. ಠೇವಣಿ ಸಂಗ್ರಹಿಸಿದೆ. ಸದಸ್ಯರ ಅಗತ್ಯಗನುಗುಣವಾಗಿ 5 ಕೋಟಿ ರೂ. ಸಾಲ ಸೌಲಭ್ಯ ಒದಗಿಸಲಾಗಿದೆ. 6.56 ಕೋಟಿ ರೂ. ದುಡಿಯುವ ಬಂಡವಾಳ ಇದ್ದು, 9 ಲಕ್ಷ ರೂ. ಲಾಭ ಗಳಿಸಿದೆ ಎಂದು ಹೇಳಿದರು.

ಗ್ರಾಹಕರ - ಸದಸ್ಯರ ವಿಶ್ವಾಸ - ಸಹಕಾರ, ಹಿತೈಷಿಗಳ ಶುಭ ಹಾರೈಕೆ, ಸಿಬ್ಬಂದಿ ವರ್ಗದವರ ಕಾಯಕ ನಿಷ್ಠೆ ಮತ್ತು ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರ ಇಚ್ಛಾಶಕ್ತಿಯಿಂದಾಗಿ ಸಂಸ್ಥೆಯು ಪ್ರಗತಿ ಪಥದಲ್ಲಿ ಮುನ್ನಡೆದಿದೆ ಎಂದು ತಿಳಿಸಿದ ಅವರು, ಅಭಿವೃದ್ಧಿಗೆ ಕಾರಣರಾದ ಎಲ್ಲರನ್ನೂ ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

ಸಂಘದ ಉಪಾಧ್ಯಕ್ಷ ಆರ್. ವಿಜಯಕುಮಾರ್ ಅವರು ಆಯ-ವ್ಯಯ ಕುರಿತಂತೆ ಮಾತನಾಡಿದರು. ನಿರ್ದೇಶಕರುಗಳಾದ ಇಂಜಿನಿಯರ್ ಎ.ಬಿ. ರವಿ, ಎನ್. ಪೂರ್ವಾಚಾರ್, ವಿ.ಎಂ. ಕೊಟ್ರೇಶಾಚಾರ್ ಅವರುಗಳು ವಾರ್ಷಿಕ ವರದಿ ವಾಚಿಸಿದರೆ, ಕಳೆದ ಸಾಲಿನ ವಾರ್ಷಿಕ ವರದಿಯನ್ನು ಸಂಘದ ಕಾರ್ಯದರ್ಶಿ ಸಿ.ಎನ್. ಬಡಿಗೇರ್ ಮಂಡಿಸಿದರು. ನಿರ್ದೇಶಕ ಎಸ್. ನಾಗರಾಜಾಚಾರ್ (ಮಾಯಕೊಂಡ) ಲಾಭ ವಿಲೇವಾರಿಯ ಮಾಹಿತಿ ನೀಡಿದರು.

ನಿರ್ದೇಶಕರುಗಳಾದ ಬಿ.ನಾಗೇಂದ್ರಾಚಾರ್ (ಬಸಾಪುರ), ಹೆಚ್.ಎನ್. ಜಯಾಚಾರ್ (ಹಿರೇಮೇಗಳಗೆರೆ), ಎಂ.ಪಿ.ನಾಗರಾಜ್ (ಶಾಮನೂರು), ಶ್ರೀಮತಿ ಆರ್. ರೇಖಾ ರಮೇಶ್, ಶ್ರೀಮತಿ ನೀಲಾವತಿ ಮಂಜುನಾಥಾಚಾರ್, ಶ್ರೀಮತಿ ಭಾಗ್ಯಮ್ಮ ಮಂಜುನಾಥ್ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಹೆಚ್. ಲೀಲಾವತಿ, ಶ್ರೀಮತಿ ಆರ್. ಲಕ್ಷ್ಮಿ, ಕೆ.ವಿ. ಶೋಭಾ, ಎನ್.ಪಿ. ನಾಗವೇಣಿ ಅವರುಗಳ ಪ್ರಾರ್ಥನೆಯ ನಂತರ ಶಾಖಾ ವ್ಯವಸ್ಥಾಪಕ ಬಿ.ಎನ್. ಭೀಷ್ಮಾಚಾರ್ ಸ್ವಾಗತಿಸಿದರು. ನಿರ್ದೇಶಕ ಬಿ.ಸಿದ್ದಾಚಾರ್ ವಂದಿಸಿದರು.

ಸಿಬ್ಬಂದಿಗಳಾದ ಎನ್. ಮುರುಳೀಧರ, ಎ.ಮಂಜುನಾಥ್ ಮತ್ತಿತರರು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

## ಮುರುಘರಾಜೇಂದ್ರ ಶಾಲೆಯಲ್ಲಿ ರಸಪ್ರಶ್ನೆ ಕಾರ್ಯಕ್ರಮ

ದಾವಣಗೆರೆ, ಡಿ.23- ಇಲ್ಲಿನ ವಿನೋಬ ನಗರದ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಬ್ಯಾಕ್ ಟು ಸ್ಕೂಲ್ ಹೆಸರಿನ ವಿನೂತನ ಆನ್‌ಲೈನ್ ರಸಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮೇಲ್ನೋಟಕ್ಕೆ ಇದು ಕನ್ನಡ ರಸಪ್ರಶ್ನೆ ಕಾರ್ಯಕ್ರಮವಾದರೂ, ಶಾಲಾ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವಲ್ಲಿ ಹಾಗೂ ಶಾಲಾ ಕಲಿಕೆ ಮುಂದುವರೆಸಲು ಸ್ಫೂರ್ತಿಯಾಗಿತ್ತು. ಮಕ್ಕಳು ವೀಕ್ಷಿಸಲು ಲಿಂಕ್ ನೀಡಿದ್ದರಿಂದ ನೂರಾರು ಮಕ್ಕಳು ವೀಕ್ಷಿಸಿ, ಆನ್‌ಲೈನ್ ಕಲಿಕೆಯಲ್ಲಿ ಆಸಕ್ತಿ ಮೂಡುವಂತಾಯಿತು.

ಶಾಲೆಯ ಹಿರಿಯ ವಿದ್ಯಾರ್ಥಿನಿ ಡಾ. ವಿಜಯ ಜಗದೀಶ್ ಇವರು ಬೆಂಗಳೂರು ಚಾಮರಾಜ ಪೇಟೆ ಜನತಾ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾಗಿದ್ದು, ಇವರ ನಾಯಕತ್ವದಲ್ಲಿ ಇದೇ ಶಾಲೆಯ ಹಿರಿಯ ವಿದ್ಯಾರ್ಥಿನಿ 2019 ರ ಮಿಸ್ಸೆಸ್ ಇಂಡಿಯಾ ರನ್ನರ್ ಅಪ್ ಹಾಗೂ ಅಂತರಾಷ್ಟ್ರೀ ಯೋಗ ಶಿಕ್ಷಕಿ ರೇಖಾ ಸಾಲಿಮಠ್, ಬಹುಮುಖ ಪ್ರತಿಭೆ ನಂದಾ ಧನ್ಪಾಲ್, ತಂತ್ರಜ್ಞಾನದಲ್ಲಿ ಹದಿನೈದು ವರ್ಷಗಳ ಸೇವೆಯ ನಂತರ ಪ್ರಸ್ತುತ ಯೋಧರಿಗೆ ಚಿಕಿತ್ಸಾ ಸೇವೆ ಸಲ್ಲಿಸುತ್ತಿರುವ ಶಾಂತಲ ಮಾಮಿಲ್ಲ, ಫ್ಯಾಷನ್ ಡಿಸೈನರ್ ಚಿನ್ನಮ್ಮ ಇವರೆಲ್ಲರೂ ಸೇರಿ ಆನ್‌ಲೈನ್ ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟರು.

## ಸಿಸ್ಟರ್ ಅಭಯ ಹತ್ಯೆ ; ಇಬ್ಬರಿಗೆ ಜೀವಾವಧಿ ಶಿಕ್ಷೆ

ತಿರುವನಂತಪುರಂ, ಡಿ. 23 – 28 ವರ್ಷಗಳ ಹಿಂದೆ ನಡೆದ ಸಿಸ್ಟರ್ ಅಭಯ ಹತ್ಯೆ ಪ್ರಕರಣಕ್ಕೆ ಸಂಬಂದಿಸಿದಂತೆ ಕ್ಯಾಥೊಲಿಕ್ ಪೂಜಾರಿ ಹಾಗೂ ಕ್ರಿಶ್ಚಿಯನ್ ಸನ್ಯಾಸಿನಿಗೆ ಸಿಬಿಐ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.


ಫಾತರ್ ಥಾಮಸ್ ಕೊಟ್ಟೂರ್‌ಗೆ ದುಪ್ಪಟ್ಟು ಜೀವಾವಧಿ ಶಿಕ್ಷೆ ವಿಧಿಸಿರುವ ವಿಶೇಷ ಸಿಬಿಐ ನ್ಯಾಯಮೂರ್ತಿ ಕೆ. ಸನಲ್ ಕುಮಾರ್, 6.5 ಲಕ್ಷ ರೂ.ಗಳ ದಂಡವನ್ನೂ ವಿಧಿಸಿದ್ದಾರೆ. ಸಿಸ್ಟರ್ ಸೆಫಿಗೆ ಜೀವಾವಧಿ ಶಿಕ್ಷೆ ಹಾಗೂ 5.5 ಲಕ್ಷ ರೂ.ಗಳ ದಂಡ ವಿಧಿಸಲಾಗಿದೆ. ಉಭಯರು 1992ರಲ್ಲಿ ನಡೆದ ಸಿಸ್ಟರ್ ಅಭಯ ಹತ್ಯೆಯ ದೋಷಿಗಳು ಎಂದು ನ್ಯಾಯಾಲಯ ಮಂಗಳವಾರ ತೀರ್ಪು ನೀಡಿತ್ತು.

## ನಗರದ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧನುರ್ಮಾಸದ ಪೂಜೆ ಆರಂಭ

ದಾವಣಗೆರೆ,ಡಿ.23- ನಗರದ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀಮತಿ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧನುರ್ಮಾಸದ ಪೂಜಾ ಕಾರ್ಯಕ್ರಮಗಳು ಇದೇ ದಿನಾಂಕ 16ರಿಂದ ಆರಂಭಗೊಂಡಿದ್ದು, ಬರುವ ಜನವರಿ 14ರವರೆಗೆ ನಡೆಯಲಿವೆ.

ದೇವಸ್ಥಾನದ ಶ್ರೀ ವಿನಾಯಕ ಸೇವಾ ಸಮಿತಿ ಆಶ್ರಯದಲ್ಲಿ ಏರ್ಪಾಡಾಗಿರುವ ಈ ಪೂಜಾ ಕಾರ್ಯಕ್ರಮಗಳಲ್ಲಿ ಪ್ರತಿದಿನ ಬೆಳಿಗ್ಗೆ 6.30ಕ್ಕೆ ಶ್ರೀ ಅಮ್ಮನವರಿಗೆ ವೈಯಕ್ತಿಕ ಪೂಜೆಗಳು ಜರುಗಲಿವೆ. ಭಾಗವಹಿಸಲಿಚ್ಛಿಸುವ ಸೇವಾರ್ಥಿಗಳು ತಮ್ಮ ಸೇವೆಯ ದಿನಾಂಕವನ್ನು ದೇವಸ್ಥಾನದಲ್ಲಿ ಮುಂಚಿತವಾಗಿ ನೋಂದಾಯಿಸಬೇಕು.

ಇದೇ ದಿನಾಂಕ 25ರ ಶುಕ್ರವಾರ ವೈಕುಂಠ ಏಕಾದಶಿ, ದಿನಾಂಕ 27ರ ಭಾನುವಾರ ಬೆಳಿಗ್ಗೆ 8 ಕ್ಕೆ



ವಿಶೇಷ ಪೂಜೆ, ದಿನಾಂಕ 30ರ ಬುಧವಾರದ ಹೊಸ್ತಿಲು ಹುಣ್ಣಿಮೆಯಂದು ಶ್ರೀ ದತ್ತಾತ್ರೇಯ ಜಯಂತಿ ಜರುಗಲಿದೆ.

ಜನವರಿ 2ರ ಶನಿವಾರ ಶ್ರೀ ಸಂಕಷ್ಟಹರ ಚತುರ್ಥಿ, ಜನವರಿ 13ರ ಬುಧವಾರದ ಎಳ್ಳು ಅಮವಾಸ್ಯೆಯಂದು ಶ್ರೀ ನಾಗಲಿಂಗೇಶ್ವರ ದೇವರಿಗೆ ಶ್ರೀ ರುದ್ರಾಭಿಷೇಕ, ಶ್ರೀ ಮೃತ್ಯುಂಜಯ ಹೋಮ ನಡೆಯಲಿದೆ.

ಜನವರಿ 14ರ ಗುರುವಾರ ಧನುರ್ಮಾಸ ಪೂಜೆ ಸಮಾಪ್ತಿಯಾಗಲಿದ್ದು, ಅಂದು ಶ್ರೀ ಮಹಾವಿಷ್ಣು, ಶ್ರೀ ಮಹಾಲಕ್ಷ್ಮಿ ಹೋಮ ಆಯೋಜನೆಗೊಂಡಿದೆ ಎಂದು ದೇವಸ್ಥಾನದ ಸಮಿತಿ ಅಧ್ಯಕ್ಷ ಆರ್.ಜಿ.ನಾಗೇಂದ್ರ ಪ್ರಕಾಶ್ ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ.

## ಕೆರೆಗಳಿಗಾಗಿ 12 ಕೋಟಿ ರೂ ಮೀಸಲು

(1ನೇ ಪುಟದಿಂದ) ದಾವಣಗೆರೆ ನಗರಕ್ಕೆ ಸೀಮಿತವಾಗಿಲ್ಲ. ಹರಿಹರದ ಪಾರ್ಕ್, ರಸ್ತೆ ಅಭಿವೃದ್ಧಿಗೂ ಅನುದಾನ ಒದಗಿಸಲಾಗಿದೆ ಎಂದು ಹೇಳಿದರು.

ಬಾತಿ ಕೆರೆಯನ್ನು ದೂಡಾಕ್ಕೆ ಹಸ್ತಾಂತರಿಸುವಂತೆ ಕೋರಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದು ಹಸ್ತಾಂತರಗೊಂಡ ತಕ್ಷಣವೇ ಕೆರೆಯ ಪಕ್ಕದಲ್ಲಿರುವ 44 ಎಕರೆ ಜಾಗದಲ್ಲಿ ಫ್ಯಾಂಟಸಿ ಪಾರ್ಕ್ ಮಾದರಿಯಲ್ಲಿ ಎಲ್ಲಾ ಚಟುವಟಿಕೆ ಇರುವಂತೆ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ದೂಡಾದಿಂದ ಹೊಸ ಬಡಾವಣೆ ಅಭಿವೃದ್ಧಿ ಪಡಿಸಲು ಕುಂದುವಾಡದ ಸಮೀಪ ಜಮೀನು ನೋಡಲಾಗಿದ್ದು, ಸರ್ವೇ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇಲ್ಲಿ ಹೊಸ ಲೇಔಟ್ ನಿರ್ಮಾಣವಾದರೆ ನಿರ್ಗತಿಕರಿಗೆ ನಿವೇಶನ ದೊರೆಯಲಿದೆ ಎಂದು ಹೇಳಿದರು.

ಶಾಸಕ ಎಸ್.ಎ.ರವೀಂದ್ರನಾಥ್, ದೂಡಾ ಆಯುಕ್ತ ಬಿ.ಟಿ.ಕುಮಾರಸ್ವಾಮಿ, ಸದಸ್ಯರಾದ ನಾಗರಾಜ್ ಎಂ. ರೋಖಡೆ, ಜಯರುದ್ರಪ್ಪ, ಆರ್. ಎಲ್.ದೇವಿರಮ್ಮ, ಸೌಭಾಗ್ಯ ಮುಕುಂದ ಮತ್ತಿತರರು ಈ ವೇಳೆ ಹಾಜರಿದ್ದರು.

## ಕಿತ್ತೂರು ರಾಣಿ ಚೆನ್ನಮ್ಮ/ವೀರ ಮಹಿಳೆ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಡಿ.23- ಮಹಿಳಾ ಕ್ಷೇತ್ರದಲ್ಲಿ ಆದರ್ಶ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಹಸ ಪ್ರದರ್ಶಿಸಿ, ಹೋರಾಡಿದ ಮಹಿಳೆಗೆ ಈ ಸಾಲಿನ ವೀರ ಮಹಿಳೆ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ನಮೂನೆಗಳನ್ನು ಉಪನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಚೇರಿ, ದಾವಣಗೆರೆ ಇಲ್ಲಿ ಪಡೆದು, ಕನ್ನಡ ಭಾಷೆಯಲ್ಲಿ ಭರ್ತಿ ಮಾಡಿ, ಅರ್ಜಿಗಳನ್ನು ದ್ವಿಪ್ರತಿಯಲ್ಲಿ, ಉಪನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸರ್ಕಾರಿ ಬಾಲಕರ ಬಾಲ ಮಂದಿರ ಕಟ್ಟಡ, 14ನೇ ಮುಖ್ಯ ರಸ್ತೆ, ಕುವೆಂಪುನಗರ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ 08192-264056 ಇಲ್ಲಿಗೆ ಜನವರಿ 25 ರೊಳಗೆ ಅರ್ಜಿ ಸಲ್ಲಿಸುವುದು.

## ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷರಾಗಿ ಸಿದ್ದಪ್ಪ ಸಂಗಣ್ಣನವರ್



ಮಲೇಬೆನ್ನೂರು, ಡಿ.23- ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷರಾಗಿ ಗೋವಿನಹಾಳ್ ಸ.ಹಿ.ಪ್ರಾ ಶಾಲೆಯ ಶಿಕ್ಷಕ ಸಿದ್ದಪ್ಪ ಸಂಗಣ್ಣನವರ್ ನೇಮಕಗೊಂಡಿದ್ದಾರೆ. ಅವರು ಹರಿಹರ ತಾ.ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರಾಗಿಯೂ ಕಳೆದ ವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದರು.

### ದಿನದ ಚುಟುಕು

ಮೂಕವಾದವು
ಪದಗಳು
ಮೌನವಾದವು
ಮನಗಳು
ಕಳೆಯದಿರಲಿ ಭಾವನೆ
ಕೆಡಿಸದಿರಲಿ ಚಿಂತನೆ.
- ಶ್ರೀಮತಿ ವೀಕೆಎಂ

# ಪ್ರಗತಿಯ ಪಥದಲ್ಲಿ ದಾನೇಶ್ವರಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್



ದಾವಣಗೆರೆ,ಡಿ.23- ಪ್ರಗತಿಯ ಪಥದಲ್ಲಿರುವ ನಗರದ ಕೆಲವೇ ಪತ್ತಿನ ಸಹಕಾರ ಸಂಘಗಳಲ್ಲಿ ದಾವಣಗೆರೆ ಶ್ರೀ ದಾನೇಶ್ವರಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಕೂಡಾ ಒಂದಾಗಿದೆ ಎಂದು ಹೋಟೆಲ್ ಉದ್ಯಮಿಯೂ ಆಗಿರುವ ಸಂಘದ ಅಧ್ಯಕ್ಷ ಕೆ.ಎಂ. ರವಿಶಂಕರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಸಂಘದ ಕಚೇರಿಯಲ್ಲಿ ಮೊನ್ನೆ ಏರ್ಪಾಡಾಗಿದ್ದ ಸಂಘದ 6ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಮ್ಮ ಸಂಸ್ಥೆಯು ಅಲ್ಪ ಅವಧಿಯಲ್ಲೇ ಪ್ರಗತಿಯ ಮುಂಚೂಣಿಯಲ್ಲಿದ್ದು, ಸಂಘದ ಸದಸ್ಯರಿಗೆ ಶೇ. 6 ರಂತೆ ಭಾಜ್ಯಾಂಶ ನೀಡಲು ಸಂಘದ ಆಡಳಿತ ಮಂಡಳಿ ತೀರ್ಮಾನ ಕೈಗೊಂಡಿದೆ ಎಂದು ರವಿಶಂಕರ್ ಅವರು ಸಂಘದ ಸದಸ್ಯರ ಚಪ್ಪಾಳೆಗಳ ಮಧ್ಯೆ ಘೋಷಿಸಿದರು.

ಸಂಘದ ಸದಸ್ಯರ - ಗ್ರಾಹಕರ ಪ್ರೀತಿ - ವಿಶ್ವಾಸ - ನಂಬಿಕೆ, ಸಿಬ್ಬಂದಿ ವರ್ಗದವರ ಶ್ರಮ ಹಾಗೂ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರ ಇಚ್ಛಾಶಕ್ತಿಯಿಂದಾಗಿ ಶ್ರೀ ದಾನೇಶ್ವರಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಪ್ರಗತಿಯಲ್ಲಿದೆ ಎಂದು ತಿಳಿಸಿ, ಸಹಕಾರ ನೀಡಿದ ಎಲ್ಲರನ್ನೂ ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರುಗಳಾದ ಹಿರಿಯ ವಕೀಲ ಡಿ.ಎಸ್. ಜಯರಾಜ್, ಬೇತೂರು ರಾಜೇಶ್, ಡಿ.ಎಸ್. ವಿಜಯಕುಮಾರ್, ಶ್ರೀಮತಿ ಎಸ್.ಜೆ. ನಯನ ಮತ್ತಿತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಿರ್ದೇಶಕರಾದ ಶ್ರೀಮತಿ ಸುಕನ್ಯಾ ಬಿ. ಬೆಳ್ಳೂಡಿ ಅವರ ಪ್ರಾರ್ಥನೆಯ ನಂತರ ಉಪಾಧ್ಯಕ್ಷ ಬಿ. ಜಗದೀಶ್ ಸ್ವಾಗತಿಸಿದರು. ನಿರ್ದೇಶಕ ಆರ್. ಕರಿಬಸವರಾಜ್ ವಾರ್ಷಿಕ ಮಹಾಸಭೆಯ ವರದಿ ವಾಚಿಸಿದರು. ವ್ಯವಸ್ಥಾಪಕ ಬಿ.ಹೆಚ್. ಈಶ್ವರಯ್ಯ ಅವರು ಲಾಭ ವಿಂಗಡಣೆ ಮತ್ತು ಅಂದಾಜು ಆಯ-ವ್ಯಯ ಕುರಿತಂತೆ ಮಾತನಾಡಿದರು. ನಿರ್ದೇಶಕ ಎಸ್.ಬಿ. ನಿಜಗುಣ ಶಿವಯೋಗಿ ವಂದಿಸಿದರು.

## ಪಿಎಂ - ಕಿಸಾನ್ ಕಂತು ಪಾವತಿ

(1ನೇ ಪುಟದಿಂದ) ಪಿಎಂ - ಕಿಸಾನ್ ಯೋಜನೆಯಡಿ ರೈತರಿಗೆ ಪ್ರತಿ ವರ್ಷ 6 ಸಾವಿರ ರೂ.ಗಳ ನೆರವು ನೀಡಲಾಗುತ್ತದೆ. ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ 2 ಸಾವಿರ ರೂ.ಗಳನ್ನು ಮೂರು ಕಂತುಗಳಲ್ಲಿ ಹಣ ನೀಡಲಾಗುತ್ತದೆ.






# 48 ಗಂಟೆಗಳಲ್ಲೇ ಐವರು ಕೊಲೆ ಆರೋಪಿಗಳ ಸೆರೆ

### ಹಣಕ್ಕಾಗಿ ವ್ಯಕ್ತಿಯ ಹತ್ಯೆ ಪ್ರಕರಣ

ದಾವಣಗೆರೆ, ಡಿ.23- ಹಣಕ್ಕಾಗಿ ಮದರಸಾದಲ್ಲಿ ಮಲಗಿದ್ದ ವ್ಯಕ್ತಿಯನ್ನು ಹತ್ಯೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಕೊಲೆ ಆರೋಪಿಗಳನ್ನು ಘಟನೆ ನಡೆದ 48 ಗಂಟೆಗಳಲ್ಲೇ ಹೊನ್ನಾಳಿ ಪೊಲೀಸರು ಬಂಧಿಸಿದ್ದು, ಬಂಧಿತರಿಂದ 1 ಲಕ್ಷದ 11 ಸಾವಿರ ರೂ. ನಗದು, ಕೃತ್ಯಕ್ಕೆ ಬಳಸಿದ್ದ 1 ಚಾಕು, 2 ಬೈಕ್‌ಗಳನ್ನು ಜಪ್ತು ಮಾಡಿದ್ದಾರೆ.




ಅದೇ ಗ್ರಾಮದ ಶೋಯಬ್ ಅಕ್ತರ್ ಅಲಿಯಾಸ್ ಶೇಬು, ಮುಮ್ತಾಕೀಂ ಅಲಿಯಾಸ್ ಮುಂತು, ಮಹಮ್ಮದ್ ಜಿಕ್ರಿಯಾ, ಮುಜಾಮಿಲ್, ಇಕ್ಬಾಲ್ ಬಂಧಿತರು.

ಹೊನ್ನಾಳಿ ತಾಲ್ಲೂಕು ಹುಣಸಘಟ್ಟ ಗ್ರಾಮದ ವಾಸಿ ಎನ್ನಲಾದ ನಜೀರ್ ಅಹಮ್ಮದ್ (50) ಎಂಬಾತ ಗ್ರಾಮದ ಮದರಸಾದಲ್ಲಿ ಪ್ರತೀ ದಿನದಂತೆ ಡಿ.19ರಂದು ರಾತ್ರಿ ಮಲಗಿದ್ದ ವೇಳೆ ಬಂಧಿತ ಆರೋಪಿಗಳು ಹಣಕ್ಕಾಗಿ ಕೊಲೆ ಮಾಡಿದ್ದರು. ಈ ಬಗ್ಗೆ ಡಿ.20ರಂದು ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಚನ್ನಗಿರಿ ಉಪ ವಿಭಾಗದ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಮಾರ್ಗದರ್ಶನದಲ್ಲಿ ಸಿಪಿಐ ಟಿ.ವಿ. ದೇವರಾಜ ನೇತೃತ್ವದಲ್ಲಿ ಎಸ್‌ಐ ಬಸವರಾಜ ಬಿರಾದಾರ, ಎಎಸ್ ಐ ಪರಶುರಾಮಪ್ಪ, ಸಿಬ್ಬಂದಿಗಳಾದ ಎಂ. ಫೈರೋಜ್ ಖಾನ್, ವೆಂಕಟರಮಣ, ಹರೀಶ, ಜಗದೀಶ, ಭರತಕುಮಾರ, ಬಸವರಾಜ ಜಂಬೂರ, ಪ್ರಸನ್ನ, ವೆಂಕಟೇಶ, ಜೀಪು ಚಾಲಕರಾದ ರಮೇಶ, ನಾಗರಾಜ ತಂಡ ಕೊಲೆ ಪ್ರಕರಣ ಪತ್ತೆ ಮಾಡಿ ಶೋಯಬ್ ಅಕ್ತರ್, ಮುಮ್ತಾಕೀಂ ಇಬ್ಬರನ್ನೂ ಬಂಧಿಸಿ, ವಿಚಾರಣೆಗೊಳಪಡಿಸಿದಾಗ ನಜೀರ್ ಅಹಮ್ಮದ್ ಕೊಲೆ ಮಾಡಿರುವುದಾಗಿ ಬಾಯಿ ಬಿಟ್ಟಿದ್ದಾರೆ.

ನಂತರ ತನಿಖೆ ಮುಂದುವರೆಸಿದಾಗ ಕೊಲೆ ಪ್ರಕರಣದ ಸಾಕ್ಷಿ ನಾಶ ಮಾಡಿ, ಕೃತ್ಯಕ್ಕೆ ಸಹಕರಿಸಿದ ಇತರೆ ಮೂವರು ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು. ಪ್ರಕರಣದ ತನಿಖೆ ಮುಂದುವರೆದಿದೆ ಎಂದು ಎಸ್ಪಿ ಹನುಮಂತರಾಯ ತಿಳಿಸಿದ್ದಾರೆ.

## ವಾಮದೇವಪ್ಪ ಅವರಿಗೆ 'ನಮ್ಮ ಸಾಧಕರು' ಪ್ರಶಸ್ತಿ



ದಾವಣಗೆರೆ, ಡಿ.23- ದೊಡ್ಡ ಬಾತಿ ಯಲ್ಲಿರುವ ವಿಶ್ವಗುರು ಭಾರತ ಪ್ರತಿಷ್ಠಾನದ 'ನಮ್ಮ ಸಾಧಕರು' ಪ್ರಶಸ್ತಿಗೆ ದಾವಣ ಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಶಿವಕುಮಾರ್ ಮೇಗಳಮನಿ ತಿಳಿಸಿದ್ದಾರೆ.

ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿ ವಾಮದೇವಪ್ಪ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಶಂಭುಲಿಂಗಪ್ಪ ಹೊಸಮನಿ ತಿಳಿಸಿದ್ದಾರೆ.

